2016 ಕ.ತೀ.ವ. 913

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಮೋಹನ್ ಎಂ. ಶಾಂತನಗೌಡರ್
## ಮತ್ತು
## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಬೂದಿಹಾಳ್ ಆರ್.ಬಿ.

## ಸಲೀಂ ಪಾಷಾ –ವಿರುದ್ಧ– ಕರ್ನಾಟಕ ರಾಜ್ಯ, (ಕೊಡಿಗೆಹಳ್ಳಿ ಪೊಲೀಸ್ ಠಾಣೆ, ಬೆಂಗಳೂರು) *

ದಂಡ ಪ್ರಕ್ರಿಯಾ ಸಂಹಿತೆ ಕಲಂ 374(2)ರಡಿಯಲ್ಲಿ ಕ್ರಿಮಿನಲ್ ಅರ್ಜಿ.

ಮೇಲ್ಮನವಿದಾರರನ್ನು ಭಾರತ ದಂಡ ಸಂಹಿತೆ ಕಲಂ 302ರಡಿಯಲ್ಲಿ ಶಿಕ್ಷಿಸುವಂತೆ ಅಧಿವಿಚಾರಣಾ ನ್ಯಾಯಾಲಯವು ನೀಡಿದ ಆದೇಶ ಕ್ರಮವನ್ನು ಪ್ರಶ್ನಿಸಿ ಸದರಿ ಮೇಲ್ಮನವಿ.

ಅಧಿವಿಚಾರಣಾ ನ್ಯಾಯಾಲಯದಲ್ಲಿ ನೀಡಿದ ಸಾಕ್ಷ್ಯಾಧಾರಗಳನ್ನು ಕೂಲಂಕುಷವಾಗಿ ಮರು ಪರಿಶೀಲಿಸಿದ ಉಚ್ಚ ನ್ಯಾಯಾಲಯವು ಪಿಡಬ್ಲ್ಯೂ.9 ಸಾಕ್ಷಿಯು ಪ್ರಾಸಿಕ್ಯೂಷನ್ ಮೊಕದ್ದಮೆಯನ್ನು ಸುಧಾರಿಸ ಹೊರಟಿದ್ದಾರೆ ಹಾಗೂ ಪಿಡಬ್ಲ್ಯೂ.10 ಮರು ವಿಚಾರಣೆಯಲ್ಲಿ ನೀಡಿದ ಹೇಳಿಕೆ, ಮುಖ್ಯ ವಿಚಾರಣೆಯಲ್ಲಿ ನೀಡಿದ ಹೇಳಿಕೆಗಿಂತ ಬೇರೆಯಾಗಿರುವುದರಿಂದ ಪಿ.ಡಬ್ಲ್ಯೂ.9 ಮತ್ತು 10ರ ಸಾಕ್ಷಿಗಳು ನಂಬಿಕಾರ್ಹವಲ್ಲವೆಂದು ಅಭಿಪ್ರಾಯಪಟ್ಟಿದೆ. ಆದರೂ ಪ್ರಾಸಿಕ್ಯೂಷನ್ ನೀಡಿರುವ ಪಿಡಬ್ಲ್ಯೂ.3 ಮತ್ತು ಪಿಡಬ್ಲ್ಯೂ.8 ಸಾಕ್ಷಿಯನ್ನು ನಂಬದಿರಲು ಯಾವುದೇ ಸಕಾರಣಗಳು ಇಲ್ಲವೆಂದು ಅಭಿಪ್ರಾಯಪಟ್ಟ ಉಚ್ಚ ನ್ಯಾಯಾಲಯವು ಸದರಿ ಮೇಲ್ಮನವಿಯನ್ನು ವಜಾಗೊಳಸಿದೆ.

* ಕ್ರಿಮಿನಲ್ ಅಪೀಲು ಸಂಖ್ಯೆ: 1188/2011, ದಿನಾಂಕ: 23ನೇ ಜುಲೈ, 2015

***ಉಲ್ಲೇಖಿಸಲಾದ ಮೊಕದ್ದಮೆ:*** ***ಪ್ಯಾರಾದಲ್ಲಿ***

*1. (1999) 9 ಎಸ್‌ಸಿಸಿ 525*
*ಲೀಲಾ ರಾಮ್ –ವಿರುದ್ಧ– ಹರಿಯಾಣ ರಾಜ್ಯ (ಉಲ್ಲೇ) 15*

ಅಪೀಲುದಾರರ ಪರ: ಶ್ರೀ ಮಹ್ಮದ್ ತಹೀರ್, ವಕೀಲರು.
ಪ್ರತ್ಯಪೀಲುದಾರರ ಪರ: ಶ್ರೀ ವಿಜಯಕುಮಾರ್ ಮಜಗೆ,
ಹೆಚ್ಚುವರಿ ರಾಜ್ಯ ಪಬ್ಲಿಕ್ ಪ್ರಾಸಿಕ್ಯೂಟರ್.

**ತೀರ್ಪು**

**ನ್ಯಾಯಮೂರ್ತಿ ಮೋಹನ್ ಎಂ. ಶಾಂತನಗೌಡರ್:**

ಭಾರತೀಯ ದಂಡ ಸಂಹಿತೆಯ 302ನೇ ಪ್ರಕರಣದ ಮೇರೆಗೆ ದಂಡಿಸಬಹುದಾದ ಅಪರಾಧಕ್ಕಾಗಿ ಆಪಾದಿತ – ಅಪೀಲುದಾರನನ್ನು ಇಲ್ಲಿ ಅಪರಾಧಿಯೆಂದು ನಿರ್ಣಯಿಸಿ ಎಸ್.ಸಿ ಸಂಖ್ಯೆ: 611/2010ರಲ್ಲಿ IIನೇ ಹೆಚ್ಚುವರಿ ಸಿಟಿ ಸಿವಿಲ್ ಹಾಗೂ ಸೆಷನ್ಸ್ ನ್ಯಾಯಾಲಯವು ಹೊರಡಿಸಿದ ದಿನಾಂಕ 13.10.2011ರಂದು ಹೊರಡಿಸಿದ ಅಪರಾಧ ನಿರ್ಣಯದ ತೀರ್ಪು ಮತ್ತು ಆದೇಶವು – ಆಪಾದಿತನನ್ನು ಅಪರಾಧಿಯೆಂದು ನಿರ್ಣಯಿಸಿರುವುದರ ವಿರುದ್ಧ ಅಪೀಲು ಹೂಡಲಾಗಿದೆ.

ಇಲ್ಲಿ ಆಪಾದಿತ ಸಂ.1 ಆಗಿರುವ ಅಪೀಲುದಾರನು, ಅಧಿವಿಚಾರಣಾ ನ್ಯಾಯಾಲಯದ ಮುಂದೆ ಅಧಿವಿಚಾರಣೆಯನ್ನು ಎದುರಿಸಿದ್ದಾನೆ. ಆಪಾದಿತ ಸಂ.2 ಎಂದರೆ ಖಲೀಂ @ ಖಲೀಮ್ ಪಾಷಾ ಬಾಲಾಪರಾಧಿಯಾಗಿದ್ದನು ಮತ್ತು ಇದರಿಂದ ಇವನು ಪ್ರತ್ಯೇಕವಾಗಿ ಬಾಲಾಪರಾಧಿ ನ್ಯಾಯ ಮಂಡಳಿಯಲ್ಲಿ ಅಧಿವಿಚಾರಣೆಗೊಳಗಾಗಿರುವನು.

2. ಸಂಕ್ಷಿಪ್ತವಾಗಿ ಪ್ರಾಸಿಕ್ಯೂಷನ್‌ನ ವಾದ ಏನೆಂದರೆ, ಆಪಾದಿತ ಮತ್ತು ಮೃತರ ನಡುವೆ ಹಣಕಾಸಿನ ವ್ಯವಹಾರವಾಗಿದ್ದು; ಪ್ರಶ್ನಿತ ಘಟನೆಗೆ ಮೊದಲು ಎಂದರೆ ಹಣಕಾಸಿನ ವ್ಯವಹಾರಕ್ಕೆ ಸಂಬಂಧಿಸಿದಂತೆ ಶಿವರಾತ್ರಿ ಹಬ್ಬದಂದು; ಜಗಳ ನಡೆದಿತ್ತು; ಪ್ರಾ.ಸಾ.3, 8 ಹಾಗೂ ಇತರರು ಮಧ್ಯೆ ಪ್ರವೇಶಿಸಿ ಜಗಳವನ್ನು ಬಿಡಿಸಿದ್ದರು.

ಹಿಂದೆ ನಡೆದ ಘಟನೆಯ ಹಿನ್ನೆಲೆಯಲ್ಲಿ 5.3.2010ರಂದು ರಾತ್ರಿ ಸುಮಾರು 9.15ರಲ್ಲಿ, ಆರೋಪಿಗಳಿಬ್ಬರು ಕೊಡಿಗೇಹಳ್ಳಿ ಮುಖ್ಯರಸ್ತೆಯಲ್ಲಿರುವ ಗೋಲ್ಡ್ ಫಿಂಚ್ ಆಸ್ಪತ್ರೆ ಎದುರು ಬಂದಿದ್ದಾರೆ; ಮೃತನು ತನ್ನ ಮನೆಯ ಕಡೆಗೆ ಹೋಗುತ್ತಿರುವಾಗ, ಆರೋಪಿಗಳಿಬ್ಬರೂ ತಡೆದಿದ್ದಾರೆ; ಆಪಾದಿತ ಸಂ.1 (ಇಲ್ಲಿ ಅಪೀಲುದಾರ) ತನ್ನ ಮಂಡಿಯಿಂದ ಮೃತನ ದೇಹದ ಮೇಲೆ ಒದ್ದಿದ್ದಾನೆ ಮತ್ತು ಆಪಾದಿತ ಸಂ.2 ಬಾಲಾಪರಾಧಿಯು (ಇವನು ಈಗ ಬಾಲಾಪರಾಧ ನ್ಯಾಯ ಮಂಡಳಿಯಲ್ಲಿ ಅಧಿವಿಚಾರಣೆಗೊಳಗಾಗಿರುವನು) ಚಾಕುವನ್ನು ತೆಗೆದು ಮೃತನ ಎದೆಗೆ ಚುಚ್ಚಿದ್ದಾನೆ; ಪ್ರಾ.ಸಾ.3,8,9 ಮತ್ತು 10 ಇವರು ಪ್ರಶ್ನಿತ ಘಟನೆಗೆ ಪ್ರತ್ಯಕ್ಷ ಸಾಕ್ಷಿಯಾಗಿದ್ದರು; ಪ್ರಾ.ಸಾ.3 ಮತ್ತು 8 ಇವರು ಮೃತನನ್ನು ಕೂಡಲೇ ಗೋಲ್ಡ್ ಫಿಂಚ್ ಆಸ್ಪತ್ರೆಗೆ ಕೊಂಡೊಯ್ದಿದ್ದಾರೆ; ಆದರೂ, ಸದರಿ ಆಸ್ಪತ್ರೆಯಲ್ಲಿ ವೈದ್ಯರು ಲಭ್ಯವಿರಲಿಲ್ಲ. ಆದುದರಿಂದ ಅವರು ಗಾಯಾಳುವನ್ನು ಆಟೋರಿಕ್ಷಾದಲ್ಲಿ ಕೊಲಂಬಿಯಾ ಏಷ್ಯಾ ಆಸ್ಪತ್ರೆಗೆ ಸಾಗಿಸಿದ್ದಾರೆ. ಕೊಲಂಬಿಯಾ ಏಷಿಯಾ ಆಸ್ಪತ್ರೆಯ ಅಧಿಕಾರಿಗಳು ಗಾಯಾಳು ಮರಣ ಹೊಂದಿರುವುದಾಗಿ ಘೋಷಿಸಿದ್ದಾರೆ; ಪ್ರಾ.ಸಾ.16, ಕೊಡಿಗೇಹಳ್ಳಿ ಪೊಲೀಸು ಠಾಣೆಯ ಪೊಲೀಸು ಉಪ–ನಿರೀಕ್ಷಕರ ಮುಂದೆ ಅಪರಾಧ ಸಂ.50/2010ರಲ್ಲಿ ದಿನಾಂಕ 5.3.2010ರಂದು ಸುಮಾರು ರಾತ್ರಿ 10.45 ಗಂಟೆಗೆ ಪ್ರಥಮ ಮಾಹಿತಿ ವರದಿಯನ್ನು ದಾಖಲಿಸಿದ್ದಾರೆ; ಪ್ರಾ.ಸಾ.15, ಪೊಲೀಸ್ ಸಹಾಯಕ ಆಯುಕ್ತರು ತನಿಖೆಯನ್ನು ಪೂರ್ಣಗೊಳಿಸಿದ್ದಾರೆ ಮತ್ತು ಆಪಾದಿತರಿಬ್ಬರ ವಿರುದ್ಧ ಆರೋಪ ಪಟ್ಟಿಯನ್ನು ತಯಾರಿಸಿದ್ದಾರೆ.

3. ಸಂಬಂಧಪಟ್ಟ ವಿಷಯ ನಡೆಯುವ ಸಮಯದಲ್ಲಿ 2ನೇ ಸಂಖ್ಯೆ ಆಪಾದಿತನಾಗಿರುವ ಖಲೀಂ @ ಖಲೀಂ ಪಾಷಾನು ಬಾಲಾಪರಾಧಿಯಾಗಿರುವುದರಿಂದ ಅವನ ವಿರುದ್ಧದ ಪ್ರಕರಣವನ್ನು ವಿಭಾಗಿಸಲಾಗಿತ್ತು ಮತ್ತು ಅಧಿವಿಚಾರಣೆಗಾಗಿ ಬಾಲಾಪರಾಧ ನ್ಯಾಯ ಮಂಡಳಿಗೆ ಕಳಿಸಲಾಗಿತ್ತು ಮತ್ತು ಆ ತರುವಾಯ ಭಾರತೀಯ ದಂಡ ಸಂಹಿತೆ (ಐಪಿಸಿ)ಯ 302ನೇ ಪ್ರಕರಣದ ಮೇರೆಗೆ ದಂಡಿಸಬಹುದಾದ ಅಪರಾಧಕ್ಕಾಗಿ ಮತ್ತು ಪ.ಜಾ. ಮತ್ತು ಪ.ಪಂ. (ದೌರ್ಜನ್ಯ ಪ್ರತಿಬಂಧ) ಅಧಿನಿಯಮದ 3(2)(ವಿ) ಪ್ರಕರಣದ ಮೇರೆಗೆ ದಂಡಿಸಬಹುದಾದ ಅಪರಾಧಕ್ಕಾಗಿ ಇಲ್ಲಿ ಆಪಾದಿತ ಸಂ.1 ಅಪೀಲುದಾರನ ವಿರುದ್ಧ ಮಾತ್ರ ಅಧಿವಿಚಾರಣೆಯನ್ನು ನಡೆಸಲಾಗಿತ್ತು.

4. ತನ್ನ ಪ್ರಕರಣವನ್ನು ರುಜುವಾತುಪಡಿಸುವ ಸಲುವಾಗಿ, ಪ್ರಾಸಿಕ್ಯೂಷನ್ನು ಎಲ್ಲಾ 16 ಸಾಕ್ಷಿದಾರರನ್ನು ಪರಿಶೀಲಿಸಿ 14 ನಿಶಾನೆಗಳಿಗೆ ಮತ್ತು 8 ಮುದ್ದೆಮಾಲು ಗುರುತು ಹಾಕಿದ್ದಾರೆ. ಅಧಿವಿಚಾರಣಾ ನ್ಯಾಯಾಲಯವು ದಾಖಲೆಯಲ್ಲಿರುವ ಮುಖ್ಯ ವಿಷಯಗಳನ್ನು ಮೌಲ್ಯ ಮಾಪನ ಮಾಡಿದ ನಂತರ, ಭಾರತ ದಂಡ ಸಂಹಿತೆ 302ನೇ ಪ್ರಕರಣದ ಮೇರೆಗೆ ದಂಡಿಸಬಹುದಾದ ಅಪರಾಧಗಳಿಗಾಗಿ ಇಲ್ಲಿ ಅಪೀಲುದಾರನ ಅಪರಾಧ ನಿರ್ಣಯ ಮಾಡಿದೆ ಮತ್ತು ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ (ದೌರ್ಜನ್ಯ ಪ್ರತಿಬಂಧ) ಅಧಿನಿಯಮದ 3(2)(ಬಿ) ಪ್ರಕರಣದ ಮೇರೆಗೆ ದಂಡಿಸಬಹುದಾದ ಅಪರಾಧದಿಂದ ಅವನನ್ನು ಖುಲಾಸೆಗೊಳಿಸಲಾಗಿದೆ.

5. ಅಪೀಲುದಾರನ (1ನೇ ಸಂಖ್ಯೆಯ ಆಪಾದಿತ) ಪರವಾಗಿ ಹಾಜರಾಗಿರುವ ಮಾನ್ಯ ವಕೀಲರಾದ ಶ್ರೀ ಮಹಮ್ಮದ್ ತಹೀರ್‌ರವರು ದಾಖಲೆಯಲ್ಲಿರುವ ಸಂಪೂರ್ಣ ಮಾಹಿತಿಯನ್ನು ನಮಗೆ ತಿಳಿಯಪಡಿಸಿ, ಆಪಾದಿಸಿದ ಪ್ರತ್ಯಕ್ಷ ಸಾಕ್ಷಿದಾರರಾದ ಪ್ರಾ.ಸಾ.3, 8, 9 ಮತ್ತು 10ರ ಸಾಕ್ಷ್ಯವನ್ನು ನಂಬಲಸಾಧ್ಯವೆಂದು ಮತ್ತು ವಿಶ್ವಾಸಾರ್ಹವಲ್ಲವೆಂದು ನಿವೇದಿಸಿದ್ದಾರೆ; ಅವರೆಲ್ಲಾ ಸೃಷ್ಟಿಸಿದ ಸಾಕ್ಷಿಗಳೆಂದು; ಈ ಎಲ್ಲಾ ಆಪಾದಿತ ಪ್ರತ್ಯಕ್ಷ ಸಾಕ್ಷಿದಾರರು ಮೃತರ ಸ್ನೇಹಿತರಾಗಿದ್ದಾರೆ. ಆದುದರಿಂದ

ಅವರ ಸಾಕ್ಷ್ಯವನ್ನು ತುಂಬಾ ಎಚ್ಚರಿಕೆಯಿಂದ ಅಧಿವಿಚಾರಣಾ ನ್ಯಾಯಾಲಯವು ಮೌಲ್ಯಮಾಪನ ಮಾಡಲೇಬೇಕು; ಪ್ರಾ.ಸಾ. 3 ಮತ್ತು 8 ಕೊಲೆ ಪ್ರಕರಣದಲ್ಲಿ ಆರೋಪಿಗಳಾಗಿದ್ದಾರೆ; ಮೃತನೂ ಕೂಡ ಕ್ರಿಮಿನಲ್ ಪೂರ್ವ ವೃತ್ತಾಂತವನ್ನು ಹೊಂದಿದ್ದನು; ಪ್ರಾ.ಸಾ.9 ಮತ್ತು 10 ಮೃತರ ಆತ್ಮೀಯ ಗೆಳೆಯರಾಗಿದ್ದರೂ ಸಹ ಅವರು, ಸುಮಾರು 8 ರಿಂದ 10 ಮೀಟರುಗಳ ದೂರದಲ್ಲಿ ಘಟನೆ ನಡೆಯುವುದನ್ನು ನೋಡಿದಾಗ ಮೃತರ ಪ್ರಾಣವನ್ನು ರಕ್ಷಿಸಲು ಪ್ರಯತ್ನಿಸಿಲ್ಲ; ಪ್ರಾ.ಸಾ.9ರ ಸಾಕ್ಷ್ಯವು ವೈರುದ್ಧ್ಯಮಯವಾಗಿದ್ದು, ಪ್ರಾಸಿಕ್ಯೂಷನ್‌ನ ಪ್ರಕರಣಕ್ಕೆ ಕೆಲವು ಬೆಳವಣಿಗೆಗಳನ್ನು ತಂದಿದ್ದಾನೆ; ಆಸ್ಪತ್ರೆಯ ಎದುರಿನ ಸಾರ್ವಜನಿಕ ರಸ್ತೆಯಲ್ಲಿ ಘಟನೆ ನಡೆದಿದ್ದರೂ ಸಹ ಒಬ್ಬರೇ ಒಬ್ಬ ಪ್ರತ್ಯೇಕ ಸಾಕ್ಷಿದಾರನನ್ನು ಪರಿಶೀಲಿಸಿಲ್ಲ ಮತ್ತು ಪ್ರಾ.ಸಾ.3, 8, 9 ಮತ್ತು 10ರ ಸಾಕ್ಷ್ಯವನ್ನೇ ಪೊಲೀಸರು ಯಾಕೆ ಅವಲಂಬಿಸಿದ್ದಾರೆ ಎಂಬುದಕ್ಕೆ ಯಾವುದೇ ಕಾರಣ ಇಲ್ಲ. ಪ್ರಾ.ಸಾ.3 ಮತ್ತು 8 ಗಾಯಾಳುವನ್ನು ಆಟೋರಿಕ್ಷಾದಲ್ಲಿ ಆಸ್ಪತ್ರೆಗೆ ಸಾಗಿಸಿದರೂ ಸಹ ಈ ಸಾಕ್ಷಿದಾರರ ಬಟ್ಟೆಗಳಲ್ಲಿ ರಕ್ತದ ಕಲೆಗಳಿರಲಿಲ್ಲ ಆದುದರಿಂದ ಅವರ ಹಾಜರಾತಿಯನ್ನು ನಂಬಲಸಾಧ್ಯ; ತನಿಖಾಧಿಕಾರಿಯು ಸಹ ಸ್ಥಳದಲ್ಲಿ ಯಾವುದೇ ರಕ್ತದ ಕಲೆಗಳಿರಲಿಲ್ಲವೆಂದು ಸ್ಪಷ್ಟಪಡಿಸಿದ್ದಾರೆ; ಗಾಯದ ವಿಸ್ತೀರ್ಣ 1.5 ಸೆಂ.ಮೀ. ಆಗಿತ್ತೆಂಬುದನ್ನು ಮರಣೋತ್ತರ ಶವ ಪರೀಕ್ಷೆ ಪ್ರಕಟಪಡಿಸುತ್ತದೆ, ಇದರಿಂದ 2ನೇ ಸಂಖ್ಯೆ ಆಪಾದಿತನು ಬಳಸಿದ ಚಾಕುವಿನ ಬ್ಲೇಡು 2 ಇಂಚು ಅಗಲ ಇದ್ದುದು ಸಾಕ್ಷ್ಯದಿಂದ ಸ್ಪಷ್ಟವಾಗದಿರುವುದರಿಂದ ಯಾವುದೇ ಕಾದಾಡಿದ ಗುರುತುಗಳು ಸ್ಥಳದಲ್ಲಿ ಕಂಡು ಬಂದಿರುವುದಿಲ್ಲ. ಈ ಇತರ ಆಧಾರಗಳ ಮೇಲೆ ಅವನು ಪ್ರಾಸಿಕ್ಯೂಷನ್ನು ಯುಕ್ತ ಸಂಶಯವನ್ನು ಮೀರಿ ಈ ಪ್ರಕರಣವನ್ನು ರುಜುವಾತುಪಡಿಸಿಲ್ಲವೆನ್ನುವ ಆಧಾರದ ಮೇಲೆ ಆಪಾದಿತನನ್ನು ಖುಲಾಸೆಗೊಳಿಸಲು ಮನವಿ ಮಾಡಿಕೊಂಡಿದ್ದಾರೆ.

ಸದರಿ ನಿವೇದನೆಗಳನ್ನು ಮಾನ್ಯ ಹೆಚ್ಚುವರಿ ಎಸ್‌ಪಿಪಿ ಶ್ರೀ ವಿಜಯಕುಮಾರ್ ಮಜಗೆಯವರು ವಿರೋಧಿಸಿ, ಪ್ರಾ.ಸಾ.3 ಮತ್ತು 8ರ ಸಾಕ್ಷ್ಯವು ಸುಸಂಗತವಾಗಿದೆ, ಸಮರ್ಪಕವಾಗಿದೆ ಮತ್ತು ನಂಬಲರ್ಹವಾಗಿದೆಯೆಂದು ವಾದಿಸಿದ್ದಾರೆ; ಸದರಿ

ಸಾಕ್ಷಿದಾರರನ್ನು ಇತರ ಸೆಷನ್ಸ್ ಪ್ರಕರಣದಲ್ಲಿ ಅಧಿವಿಚಾರಣೆಯನ್ನು ನಡೆಸಿದರೂ ಕೂಡ ಈ ಪ್ರತ್ಯಕ್ಷ ಸಾಕ್ಷಿದಾರರು, ಆಪಾದಿತನ ವಿರುದ್ಧ ಯಾವುದೇ ಕೆಟ್ಟ ಭಾವನೆಯನ್ನು ಹೊಂದಿರಲಿಲ್ಲ; ಸಾಕ್ಷಿದಾರರ ಬಟ್ಟೆಗಳನ್ನು ವಶಪಡಿಸಿಕೊಳ್ಳದ ತನಿಖಾಧಿಕಾರಿಯ ಕಡೆಯಿಂದಾದ ಲೋಪಕ್ಕೆ ನ್ಯಾಯಾಲಯದ ರೀತಿಯಲ್ಲಿ ದಾಖಲೆಯಲ್ಲಿರುವ ಸಂಪೂರ್ಣ ಸಾಕ್ಷ್ಯವನ್ನು ಏಕರೂಪವಾಗಿ ನಿರ್ಧರಿಸಲು ಆಗಿರುವುದಿಲ್ಲ; ಪ್ರತ್ಯಕ್ಷ ಸಾಕ್ಷಿದಾರರು ವಿದ್ಯಾವಂತರಲ್ಲವೆನ್ನುವ ವಿಷಯವನ್ನು ದೃಷ್ಠಿಯಲ್ಲಿಟ್ಟುಕೊಂಡು ತಾಂತ್ರಿಕತೆಯಿಂದಾದ ಕಾರಣ ಮಾತ್ರದಿಂದಲೇ ಪ್ರಾಸಿಕ್ಯೂಷನ್‌ನ ವಾದವನ್ನು ತಿರಸ್ಕರಿಸಲು ಸಾಧ್ಯವಿಲ್ಲ; ಎಂಬ ಸಂಗತಿ ತಿಳಿದುಬಂದಿದ್ದು, ಆಪಾದಿತರಿಬ್ಬರ ಹೆಸರುಗಳನ್ನು ಮತ್ತು ಅವರ ವ್ಯಕ್ತ ಕೃತ್ಯಗಳನ್ನು ತೋರಿಸುವ ಘಟನೆ ನಡೆದ ಕೂಡಲೇ ದೂರು ದಾಖಲಾಗಿದೆ. ಇದು ನ್ಯಾಯಾಲಯದ ಮುಂದೆ ಮಾಡಲಾದಂಥ ಪ್ರಾಸಿಕ್ಯೂಷನ್‌ನ ವಾದವು ನಿಜವಾದುದು ಎಂಬುದನ್ನು ಸ್ಪಷ್ಟವಾಗಿ ವಿವರಿಸುತ್ತದೆ ಮತ್ತು ಪ್ರಾಸಿಕ್ಯೂಷನ್ನು ಪ್ರಕರಣವನ್ನು ಹುಟ್ಟಿಸಿಕೊಂಡು ಹೇಳುತ್ತಿಲ್ಲ. ಈ ಇತರ ಆಧಾರಗಳ ಮೇಲೆ ಅಪೀಲನ್ನು ವಜಾಗೊಳಿಸಲು ಕೋರಿದ್ದಾರೆ.

6. ನಿಶಾನೆ ಪಿ.1 ರಲ್ಲಿರುವ ಅಪರಾಧದ ಮಹಜರು ಪ್ರಕರಣಕ್ಕೆ ಪ್ರಾ.ಸಾ.1 ಸಾಕ್ಷಿದಾರನಾಗಿದ್ದಾನೆ.

ಪ್ರಾ.ಸಾ.2 ಮೃತರ ತಂದೆಯಾಗಿದ್ದಾನೆ. ಅವನು, ಅಪರಾಧ ನಡೆಯುವುದಕ್ಕೆ ಕಾರಣವಾದ ಅಂಶದ ಬಗ್ಗೆ ಹೇಳಿಕೆ ನೀಡಿದ್ದಾನೆ. ಅವನು ನ್ಯಾಯಾಲಯದ ಮುಂದೆ ಇಲ್ಲಿ ಆಪಾದಿತ ಸಂ.1 ಅಪೀಲುದಾರನನ್ನು ಗುರುತಿಸಿದ್ದಾನೆ.

ಪ್ರಾ.ಸಾ.3, 8, 9 ಮತ್ತು 10 ಇವರು ಪ್ರಶ್ನಿತ ಘಟನೆಗೆ ಪ್ರತ್ಯಕ್ಷ ಸಾಕ್ಷಿದಾರರಾಗಿದ್ದಾರೆ. ಅವರಲ್ಲಿ, ನಿಶಾನೆ ಪಿ.2ರ ಪ್ರಕಾರ ಪ್ರಾ.ಸಾ.3 ದೂರನ್ನು ದಾಖಲಿಸಿದ್ದಾನೆ. ಪ್ರಾ.ಸಾ.3 ಮತ್ತು 8 ಗೋಲ್ಡ್ ಫಿಂಚ್ ಆಸ್ಪತ್ರೆಗೆ ಸಾಗಿಸಿದ್ದಾರೆ. ಅದಾದ ನಂತರ ಕೊಲಂಬಿಯಾ ಏಷಿಯಾ ಆಸ್ಪತ್ರೆಗೆ ಸಾಗಿಸಿದ್ದಾರೆ. ಅವರು, ಸಹ

ಅಪರಾಧ ನಡೆಯುವುದಕ್ಕೆ ಪ್ರೇರೇಪಣೆಯಾದ ಬಗ್ಗೆ ಹೇಳಿಕೆ ನೀಡಿದ್ದಾರೆ. ಪ್ರತಿಯೊಬ್ಬ ಪ್ರತ್ಯಕ್ಷ ಸಾಕ್ಷಿದಾರರು, ಆಪಾದಿತರು ನಡೆಸಿದ ಕೃತ್ಯಗಳ ಬಗ್ಗೆ ಮತ್ತು ಅವರು ಚಾಕುವನ್ನು ಗುರುತಿಸಿದ್ದು (ಎಂ.ಓ.ಸಂ.1) ಅಪರಾಧ ನಡೆಸಲು ಆರೋಪಿಯು ಇದನ್ನು ಬಳಸಿದ್ದಾನೆ ಎಂದು ಹೇಳಿಕೆ ನೀಡಿದ್ದಾರೆ.

ಪ್ರಾ.ಸಾ.4 ಮತ್ತೊಬ್ಬ ಸಾಕ್ಷಿದಾರರಾಗಿದ್ದು, ಇವರು ಅಪರಾಧ ನಡೆಯುವುದಕ್ಕೆ ಪ್ರೇರೇಪಣೆಯಾದ ಬಗ್ಗೆ ಹೇಳಿಕೆ ನೀಡಿರುವರು.

ನಿಶಾನೆ ಪಿ.3 ರಲ್ಲಿರುವ ಪಂಚನಾಮೆ ವಿಚಾರಣೆಗೆ ಪ್ರಾ.ಸಾ.5 ಸಾಕ್ಷಿದಾರರಾಗಿದ್ದಾರೆ.

ನಿಶಾನೆ ಪಿ.4 ರಲ್ಲಿ ಪಂಚನಾಮೆಗೆ ಸಂಬಂಧಿಸಿದಂತೆ ಪ್ರಾ.ಸಾ.6 ಸಾಕ್ಷಿದಾರರಾಗಿದ್ದು, ಇದರ ಅಡಿಯಲ್ಲಿ ಮೃತರ ಬಟ್ಟೆಗಳನ್ನು ವಶಪಡಿಸಿಕೊಳ್ಳಲಾಗಿದೆ.

ನಿಶಾನೆ ಪಿ.6ರಲ್ಲಿರುವ ಪಂಚನಾಮೆಗೆ ಪ್ರಾ.ಸಾ.7 ಸಾಕ್ಷಿದಾರರಾಗಿದ್ದು, ಇದರ ಮೇರೆಗೆ ಚಾಕು– ಎಂಓ ಸಂ.1ನ್ನು ಕೋರಿಕೆ ಮೇರೆಗೆ ಶೋಧಿಸಲಾಗಿದೆ. 2ನೇ ಸಂಖ್ಯೆಯ ಆಪಾದಿತನು ಸದರಿ ಚಾಕುವನ್ನು ಬಚ್ಚಿಟ್ಟಿದ್ದನೆಂಬುದನ್ನು ಸಹ ಪ್ರಾ.ಸಾ.7ರ ಸಾಕ್ಷ್ಯವು ಪ್ರಕಟಪಡಿಸುತ್ತದೆ.

ಪ್ರಾ.ಸಾ.11 ಅಭಿಯಂತರರಾಗಿದ್ದು, ಇವರು ನಿಶಾನೆ ಪಿ.6ರ ಪ್ರಕಾರ ಅಪರಾಧದ ಸ್ಥಳವನ್ನು ಚಿತ್ರಿಸಿದ್ದಾರೆ.

ಪ್ರಾ.ಸಾ.12 ವೈದ್ಯರಾಗಿದ್ದು, ಇವರು ಮೃತದೇಹದ ಮರಣೋತ್ತರ ಶವಪರೀಕ್ಷೆಯನ್ನು ನಡೆಸಿದ್ದಾರೆ. ಮರಣೋತ್ತರ ಶವ ಪರೀಕ್ಷೆಯು ನಿಶಾನೆ ಪಿ.7ರಲ್ಲಿದೆ. ಅಪರಾಧ ನಡೆಸಲು ಆರೋಪಿಯು ಬಳಸಿರುವ ಚಾಕು ಎಂ.ಓ. ಸಂ.1ನ್ನು ಪರಿಶೀಲಿಸಿದ ತರುವಾಯ ನಿಶಾನೆ ಪಿ.8ರ ಪ್ರಕಾರ ಪ್ರಾ.ಸಾ.12 ತಮ್ಮ ಅಭಿಪ್ರಾಯವನ್ನು ನೀಡಿದ್ದಾರೆ.

ಪ್ರಾ.ಸಾ.13 ಇವರು ಕೊಲಂಬಿಯಾ ಏಷಿಯಾ ಆಸ್ಪತ್ರೆಗೆ ಸೇರಿದವರಾಗಿದ್ದು, ಇಲ್ಲಿ ಇವರು ಗಾಯಾಳು ಮೃತರಾಗಿರುವರೆಂದು ಘೋಷಿಸಿದ್ದರು.

ಪ್ರಾ.ಸಾ.14 ತನಿಖಾಧಿಕಾರಿಯಾಗಿದ್ದು, ಅಪರಾಧದ ತನಿಖೆ ನಡೆಸಿದ್ದಾರೆ.

ಪ್ರಾ.ಸಾ.15 ಪೊಲೀಸ್ ಸಹಾಯಕ ಆಯುಕ್ತರಾಗಿದ್ದು ಇವರು ತನಿಖೆಯನ್ನು ಪೂರ್ಣಗೊಳಿಸಿದ್ದಾರೆ ಮತ್ತು ಆರೋಪ ಪಟ್ಟಿಯನ್ನು ತಯಾರಿಸಿದ್ದಾರೆ.

ಪ್ರಾ.ಸಾ.16 ಕೊಡಿಗೇಹಳ್ಳಿ ಪೊಲೀಸು ಠಾಣೆಯ ಪೊಲೀಸು ಉಪ–ನಿರೀಕ್ಷಕರಾಗಿದ್ದಾರೆ. ಇವರು ನಿಶಾನೆ ಪಿ.2ರ ಪ್ರಕಾರ ಪ್ರಾ.ಸಾ.2 ನೀಡಿದ ದೂರನ್ನು ಸ್ವೀಕರಿಸಿದ್ದಾರೆ ಮತ್ತು ಅದನ್ನು ಆಧರಿಸಿ ಅಪರಾಧವನ್ನು ದಾಖಲಿಸಿದ್ದಾರೆ. ಇವರು ಪ್ರಥಮ ಮಾಹಿತಿ ವರದಿಯನ್ನು (ನಿಶಾನೆ ಪಿ.14) ಅಧಿಕಾರ ವ್ಯಾಪ್ತಿಯುಳ್ಳ ದಂಡಾಧಿಕಾರಿಯವರಿಗೆ ಕಳುಹಿಸಿದ್ದು, ಇದು ದಿನಾಂಕ 6.3.2010ರಂದು ಬೆಳಿಗ್ಗೆ 5.30ಕ್ಕೆ ಅಧಿಕಾರ ವ್ಯಾಪ್ತಿಯುಳ್ಳ ದಂಡಾಧಿಕಾರಿಯವರನ್ನು ತಲುಪಿದೆ.

7. ಮೇಲಿನ ಅಂಶಗಳಿಂದ, ಪ್ರಾಸಿಕ್ಯೂಷನ್‌ನ ವಾದವು, ಮುಖ್ಯವಾಗಿ, ಪ್ರತ್ಯಕ್ಷ ಸಾಕ್ಷಿದಾರರಾದ 3,8,9 ಮತ್ತು 10 ಇವರ ಸಾಕ್ಷ್ಯವನ್ನು ಆಧರಿಸಿದೆಯೆಂಬುದು ಸ್ಪಷ್ಟವಾಗುತ್ತದೆ. ನಾವು ಈ ಸಾಕ್ಷಿದಾರರ ಸಾಕ್ಷ್ಯವನ್ನು ಅವಲೋಕಿಸಿದ್ದು, ಅವರು ಮೃತರ ಸ್ನೇಹಿತರಾಗಿದ್ದರು ಮತ್ತು ಮತ್ತೊಂದು ಸೆಷನ್ಸ್ ಪ್ರಕರಣದಲ್ಲಿ ಅಧಿವಿಚಾರಣೆಯನ್ನು ಎದುರಿಸುತ್ತಿದ್ದರು ಎಂಬ ಸಂಗತಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ತುಂಬಾ ಜಾಗ್ರತೆ ಮತ್ತು ಎಚ್ಚರಿಕೆಯಿಂದ ಅವರ ಆವೃತ್ತಿಗಳನ್ನು ನಿರ್ಧರಿಸಿದ್ದೇವೆ.

8. ಪ್ರಾ.ಸಾ.3 (ಮೊದಲ ಮಾಹಿತಿದಾರ) ತನಗೆ ಮೃತನು ಬಾಲ್ಯದಿಂದಲೂ ಗೊತ್ತೆಂದು ತನಗೆ ಅವನ ತಂದೆಯೂ ಸಹ ಗೊತ್ತೆಂದು ಹೇಳಿಕೆ ನೀಡಿದ್ದಾನೆ; ಮೃತನು ಆ್ಯಕ್ಸಿಸ್ ಬ್ಯಾಂಕಿನಲ್ಲಿ ಕಾರ್ಯ ನಿರ್ವಹಿಸುತ್ತಿದ್ದುದರಿಂದ ಪ್ರಾ.ಸಾ.3 ಆಟೋರಿಕ್ಷಾ ಚಾಲಕನಾಗಿದ್ದೇನೆಂದು ಹೇಳಿಕೆ ನೀಡಿದ್ದಾನೆ. ಈತನ ಆವೃತ್ತಿಯು

ತಾನು ಮತ್ತು ಪ್ರಾ.ಸಾ.8 ಬೆಳಿಗ್ಗೆ ಸುಮಾರು 9.00 ರಿಂದ 9.15ಗಂಟೆಯಲ್ಲಿ ಗೋಲ್ಡ್ ಫಿಂಚ್ ಆಸ್ಪತ್ರೆ ಎದುರಿನಲ್ಲಿರುವ ಬೇಕರಿ ಪಕ್ಕದಲ್ಲಿ ಟೀ ಕುಡಿಯುತ್ತಿದ್ದರೆಂಬುದನ್ನು ಬಹಿರಂಗಗೊಳಿಸುತ್ತದೆ; ಅವನು 1ನೇ ಸಂಖ್ಯೆಯ ಆಪಾದಿತನು ಮೃತನನ್ನು ಮಂಡಿಯಿಂದ ಒದ್ದನೆಂದು ಇದರಿಂದ 2ನೇ ಸಂಖ್ಯೆಯ ಆಪಾದಿತ ಖಲೀಂ (ಬಾಲಾಪರಾಧದ ಅಪರಾಧಿ) ಮೃತನ ಎದೆಗೆ ತಿವಿದಿರುವುದನ್ನು ನೋಡಿದ್ದಾನೆ; ಘಟನೆಯಲ್ಲಿ ಅವರು ಮಧ್ಯೆ ಪ್ರವೇಶಿಸುವುದರೊಳಗೆ ಆಪಾದಿತರಿಬ್ಬರು ಅಪರಾಧ ನಡೆಸಿ ಆ ಸ್ಥಳದಿಂದ ಓಡಿಹೋಗಿದ್ದಾರೆ; ಅದಾದ ನಂತರ, ಪ್ರಾ.ಸಾ.3 ಮತ್ತು ಪ್ರಾ.ಸಾ.8 ಗಾಯಾಳುವನ್ನು ಗೋಲ್ಡ್ ಫಿಂಚ್ ಆಸ್ಪತ್ರೆಗೆ ಮತ್ತು ಅದಾದ ನಂತರ ಕೊಲಂಬಿಯಾ ಏಷಿಯಾ ಆಸ್ಪತ್ರೆಗೆ ಸಾಗಿಸಿದ್ದಾರೆ ಇಲ್ಲಿ ಗಾಯಾಳು ಮೃತನಾಗಿದ್ದಾನೆಂದು ತಿಳಿಸಿದ್ದಾರೆ. ಪ್ರಾ.ಸಾ.3 ನಿರ್ದಿಷ್ಟವಾಗಿ ಚೂರಿ ಇರಿತದ ಗಾಯವು ಗಾಯಾಳುವಿನ ಎದೆಯಲ್ಲಿ ಆಗಿತ್ತು ಎಂದು ಹೇಳಿಕೆ ನೀಡಿದ್ದಾರೆ. ಅವನು, ನಿಶಾನೆ ಪಿ.2ರ ಪ್ರಕಾರ ದೂರನ್ನು ದಾಖಲಿಸಿದ ಬಗ್ಗೆ ಮತ್ತು ಅಪರಾಧ ನಡೆಯಲು ಆದ ಪ್ರೇರಣೆ ಬಗ್ಗೆ ಸಹ ಹೇಳಿಕೆ ನೀಡಿದ್ದಾನೆ. ಹಣಕಾಸು ವ್ಯವಹಾರಕ್ಕೆ ಸಂಬಂಧಿಸಿದಂತೆ ಆರೋಪಿ ಮತ್ತು ಮೃತರ ನಡುವೆ ಆದ ಜಗಳದ ಬಗ್ಗೆಯೂ ಮೃತನು ತನಗೆ ತಿಳಿಸಿದ್ದನೆಂದು ಹೇಳಿಕೆ ನೀಡಿದ್ದಾನೆ ಮತ್ತು ಮೃತನು, ಶಿವರಾತ್ರಿ ಹಬ್ಬದ ದಿನದಂದು ಆಗಿರುವ ಜಗಳದ ಬಗ್ಗೆಯೂ ಸಹ ತನಗೆ ಹೇಳಿದ್ದನೆಂದು ತಿಳಿಸಿದ್ದಾನೆ. 2ನೇ ಸಂಖ್ಯೆಯ ಆಪಾದಿತನು ಅಪರಾಧ ನಡೆಸಲು ಬಳಸಿದ ಎಂ.ಓ.ಸಂ.1ನ್ನು ಪ್ರಾ.ಸಾ.3 ಗುರುತಿಸಿದ್ದಾನೆ, ಅವನು ನ್ಯಾಯಾಲಯದಲ್ಲಿ 1ನೇ ಸಂಖ್ಯೆಯ ಆಪಾದಿತನನ್ನು ಸಹ ಗುರುತಿಸಿದ್ದಾನೆ.

ಪಾಟೀ–ಸವಾಲಿನಲ್ಲಿ, ಪ್ರಾ.ಸಾ.3 ಕೊಲೆ ಪ್ರಕರಣದಲ್ಲಿ ತಾನು ಆಪಾದಿತನೆಂದು ಒಪ್ಪಿಕೊಂಡಿದ್ದಾನೆ ಮತ್ತು ನ್ಯಾಯಾಲಯದ ಮುಂದೆ ತನ್ನ ಹೇಳಿಕೆಯನ್ನು ನೀಡುವ ಹದಿನೈದು ದಿನಗಳಿಗೂ ಮೊದಲೇ ಜಾಮೀನಿನ ಮೇಲೆ ಬಿಡುಗಡೆಯಾಗಿದ್ದಾನೆ; ಜಾಮೀನಿನ ಮೇಲೆ ಅವನನ್ನು ಬಿಡುಗಡೆ ಮಾಡುವ ಸುಮಾರು 3 $^{1}/_{2}$ ತಿಂಗಳಿಗೂ ಮೊದಲು ನ್ಯಾಯಿಕ ಅಭಿರಕ್ಷೆಯಲ್ಲಿದ್ದನು; ಅವನು ಟೀ ಕುಡಿಯುವ ಮೊದಲು ಅವನ ಮನೆಯು ಬೇಕರಿಯಿಂದ ಸುಮಾರು $^{1}/_{4}$ಕಿ.ಮೀ.ಗಳ ಅಂತರದಲ್ಲಿತ್ತು;

ಅವನು 5.3.2010 ಮತ್ತು 6.3.2010ರ ನಡುವೆ ಬರುವ ಮಧ್ಯರಾತ್ರಿ 12.00 ಗಂಟೆಯವರೆಗೆ ಅವನು ಆಸ್ಪತ್ರೆಯಲ್ಲಿದ್ದನು, ಅದಾದ ನಂತರ ಅವನು 6.3.2010ರಂದು ಬೆಳಿಗ್ಗೆ ಸುಮಾರು 12.30ರಲ್ಲಿ ಪೊಲೀಸು ಠಾಣೆಗೆ ಹೋಗಿದ್ದನು; ಪೊಲೀಸರು ದಿನಾಂಕ 5.3.2010ರಂದು (ಮಧ್ಯರಾತ್ರಿ) ಸುಮಾರು 10.30.ಗಂಟೆಗೆ ಬಂದಿದ್ದರು.

ಪ್ರಾ.ಸಾ.3ನ್ನು ದೀರ್ಘ ಪಾಟೀ ಸವಾಲಿಗೆ ಒಳಪಡಿಸಿದ್ದರೂ ಸಹ 1ನೇ ಸಂಖ್ಯೆಯ ಆಪಾದಿತನು ಬಾಲಾಪರಾಧ ಅಪರಾಧಿಯೊಂದಿಗೆ ಸಾಮಾನ್ಯ ಉದ್ದೇಶವನ್ನು ಹಂಚಿಕೊಂಡಿದ್ದನು ಎಂಬುದನ್ನು ನಿರಾಕರಿಸಲು ಈ ಸಾಕ್ಷಿದಾರನಿಂದ ಒಂದೇ ಒಂದು ಮಾತನ್ನು ಕೂಡ ಪ್ರತಿವಾದಿ ಕೇಳಿಲ್ಲ. ಪ್ರಶ್ನಿತ ಘಟನೆಗೆ ಸಂಬಂಧಿಸಿದಂತೆ ಪಾಟೀ ಸವಾಲು ಇರಲಿಲ್ಲ. ಪ್ರತಿವಾದಿಯು ಈ ಸಾಕ್ಷಿದಾರನ ಪೂರ್ವ ವೃತ್ತಾಂತವನ್ನು ಮತ್ತು ಘಟನೆ ನಡೆದ ನಂತರದ ಇತರ ಸಂಗತಿಗಳನ್ನು ಮುಖ್ಯವಾಗಿ ಕೇಂದ್ರೀಕರಿಸಿತ್ತು. ಪ್ರಶ್ನಿತ ಘಟನೆಗೆ ಸಂಬಂಧಿಸಿದ ತನ್ನ ಪಾಟೀ ಸವಾಲನ್ನು ಪ್ರಾ.ಸಾ.3 ಎದುರಿಸಿದನು. ತಾನು ನಿರಾಕರಿಸಬೇಕಾಗಿರುವ ಸ್ಥಳದಲ್ಲಿ ತಾನು ಇರಲಿಲ್ಲವೆಂಬ ಸಲಹೆಯನ್ನು ಈ ಸಾಕ್ಷಿದಾರನಿಗೆ ಮಾಡಲಾಗಿತ್ತು. ಪ್ರತಿವಾದದ ದಾಖಲೆಯಲ್ಲಿ ತಂದಿದ್ದ ಇತರ ಅಂಶವನ್ನು ಅಧಿವಿಚಾರಿಸಲಿಲ್ಲ.

9. ಪ್ರಾ.ಸಾ.3ರ ಸಾಕ್ಷ್ಯವನ್ನು ಪ್ರಾ.ಸಾ.8 ಬೆಂಬಲಿಸಿದ್ದಾನೆ. ಪ್ರಾ.ಸಾ.3 ತನ್ನ ಹೇಳಿಕೆಯಲ್ಲಿ, ತಾನು ಮತ್ತು ಪ್ರಾ.ಸಾ.8 ಗೋಲ್ಡ್ ಫಿಂಚ್ ಆಸ್ಪತ್ರೆ ಎದುರಿನಲ್ಲಿರುವ ಬೇಕರಿ ಬಳಿ ಟೀ ಕುಡಿಯುತ್ತಿದ್ದೆವು ಎಂಬುದನ್ನು ಸ್ಪಷ್ಟಪಡಿಸಿರುವುದನ್ನು ನಾವು ಈಗಾಗಲೇ ತಿಳಿಸಿದ್ದೇವೆ. ಪ್ರಾ.ಸಾ.8ರ ಸಾಕ್ಷ್ಯವು ಇದೇ ಆಗಿದೆ. ಅವನು ಪ್ರಾ.ಸಾ.9 ಮತ್ತು 10 ಮತ್ತು ಮತ್ತೊಬ್ಬನನ್ನು ಹೊರತುಪಡಿಸಿ ತಾನು ಮತ್ತು ಪ್ರಾ.ಸಾ.3 ಗೋಲ್ಡ್ ಫಿಂಚ್ ಆಸ್ಪತ್ರೆಯ ಎದುರಿನಲ್ಲಿರುವ ಬೇಕರಿ ಬಳಿ ಟೀಯನ್ನು ಕುಡಿಯುತ್ತಿದ್ದೇವೆಂದು ಸಹ ಹೇಳಿಕೆ ನೀಡಿದ್ದಾನೆ. ಮತ್ತೊಂದು ಕಡೆ, ಪ್ರಾ.ಸಾ.8 ಆ ಸಮಯದಲ್ಲಿ ತನ್ನೊಂದಿಗೆ ಸ್ಥಳದಲ್ಲಿ ಪ್ರಾ.ಸಾ.3 ಇದ್ದರೆಂಬುದನ್ನು ಸ್ಪಷ್ಟಪಡಿಸಿದ್ದಾರೆ. ಪ್ರಶ್ನಿತ ಪ್ರಕರಣಕ್ಕೆ ಸಂಬಂಧಿಸಿದಂತೆ, ಮೃತನು ಹೋಗುತ್ತಿದ್ದ ಸ್ಥಳಕ್ಕೆ ಆರೋಪಿಗಳಿಬ್ಬರೂ ಬಂದರೆಂದು; ಆರೋಪಿಗಳು ಕೆಟ್ಟ ಭಾಷೆಯಲ್ಲಿ

ಮೃತನನ್ನು ಬೈದರೆಂದು ಪ್ರಾ.ಸಾ.8 ಹೇಳಿಕೆ ನೀಡಿದ್ದಾನೆ ಮತ್ತು ಮೃತನನ್ನು ಸುಮ್ಮನಿರಲು ಬಿಡಲಿಲ್ಲವೆಂದು, ಕೊನೆಗೆ 1ನೇ ಸಂಖ್ಯೆಯ ಆರೋಪಿ – ಅಪೀಲುದಾರನು ಮೃತನ ದೇಹಕ್ಕೆ ಒದ್ದನೆಂದು, ಇದರಿಂದ 2ನೇ ಸಂಖ್ಯೆಯ ಆರೋಪಿಯು ಮೃತನ ಎದೆಗೆ ಚಾಕುವಿನಿಂದ ಇರಿದನೆಂದು, ಇದಾದ ಮೇಲೆ, ಮೃತನು ರಕ್ತಸ್ರಾವದಿಂದ ಕೆಳಗೆ ಬಿದ್ದನೆಂದು; ಆರೋಪಿಗಳಿಬ್ಬರು ಸ್ಥಳದಿಂದ ಪಲಾಯನರಾದರೆಂದು; ಇದಾದ ನಂತರ ಮೃತನನ್ನು ಗೋಲ್ಡ್ ಫಿಂಚ್ ಆಸ್ಪತ್ರೆಗೆ, ಇದಾದ ನಂತರ ಕೊಲಂಬಿಯಾ ಏಷಿಯಾ ಆಸ್ಪತ್ರೆಗೆ ಸಾಗಿಸಲಾಯಿತೆಂದು ಹೇಳಿಕೆ ನೀಡಿದ್ದಾರೆ. ಪ್ರಾ.ಸಾ.3 ಹೇಳಿಕೆ ನೀಡಲಾದ ಹಾಗೆ ಅಪರಾಧ ನಡೆಯುವುದಕ್ಕೆ ಆದ ಪ್ರೇರೇಪಣೆಯ ಬಗ್ಗೆ ಸಹ ಪ್ರಾ.ಸಾ.8 ಹೇಳಿಕೆ ನೀಡಿದ್ದಾನೆ. ಅವನು, ಅಪರಾಧ ನಡೆಸುವುದಕ್ಕೆ ಬಳಸಿದ ಚಾಕುವನ್ನು ಗುರುತಿಸಿದ್ದಾನೆ.

ಪಾಟೀ ಸವಾಲಿನಲ್ಲಿ, ಪ್ರಾ.ಸಾ.8, ಹಣಕಾಸಿನ ವ್ಯವಹಾರಕ್ಕೆ ಸಂಬಂಧಿಸಿದಂತೆ ಶಿವರಾತ್ರಿ ಹಬ್ಬದ ದಿನದಂದು ಆರೋಪಿ ಮತ್ತು ಮೃತರ ನಡುವೆ ಜಗಳ ಆದಾಗ ತಾನು ಅಲ್ಲಿರಲಿಲ್ಲವೆಂದು ಒಪ್ಪಿಕೊಂಡಿದ್ದಾನೆ. ಅವನು, ಪಾಟೀ ಸವಾಲಿನಲ್ಲಿ, ಪ್ರಾ.ಸಾ.9 ಮತ್ತು 10ನ್ನು ಒಳಗೊಂಡಂತೆ ಪ್ರತ್ಯಕ್ಷ ಸಾಕ್ಷಿದಾರರು 10 ಮೀಟರುಗಳ ಅಂತರದಲ್ಲಿ ನಿಂತಿದ್ದರೆಂದು ಮತ್ತು ಸುಮಾರು 10 ನಿಮಿಷಗಳ ಅವಧಿಯಲ್ಲಿ ಘಟನೆ ನಡೆಯಿತೆಂದು ಮತ್ತೆ ಸ್ಪಷ್ಟಪಡಿಸಿದ್ದಾರೆ. ಪ್ರಾ.ಸಾ.8 ಜಗಳದಲ್ಲಿ ಮಧ್ಯೆ ಪ್ರವೇಶಿಸುವ ಪ್ರಯತ್ನ ಮಾಡಲಿಲ್ಲ; ಆದಾಗ್ಯೂ, ಇಬ್ಬರು ಇತರ ವ್ಯಕ್ತಿಗಳು ಜಗಳವನ್ನು ಬಿಡಿಸಲು ಪ್ರಯತ್ನಿಸಿದರು; ಗಾಯಾಳುವನ್ನು ಕೊಲಂಬಿಯಾ ಏಷಿಯಾ ಆಸ್ಪತ್ರೆಗೆ ಸೇರಿಸಿದ ನಂತರ ರಾತ್ರಿ ಸುಮಾರು 10.45ಕ್ಕೆ ಅವನು ತನ್ನ ಮನೆಗೆ ಹಿಂತಿರುಗಿದನು; ಆದರೂ, ಪ್ರಾ.ಸಾ.3 ಆಸ್ಪತ್ರೆಯಲ್ಲಿ ಉಳಿದುಕೊಂಡನು. ಪ್ರಾ.ಸಾ.8, ತಾನು ಕೊಲೆ ಪ್ರಕರಣದಲ್ಲಿ ಆರೋಪಿಯೆಂದು ಒಪ್ಪಿಕೊಂಡಿದ್ದಾನೆ ಮತ್ತು ಸದರಿ ಪ್ರಕರಣವು ಇತ್ಯರ್ಥದಲ್ಲಿದೆ; ಅವನನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ; ಅವನು ಸುಮಾರು ಮೂರು ತಿಂಗಳುಗಳ ಅವಧಿಗೆ ನ್ಯಾಯಿಕ ಅಭಿರಕ್ಷೆಯಲ್ಲಿದ್ದನು. ಈ ಮಾಹಿತಿಯನ್ನು ಹೊರತುಪಡಿಸಿದರೆ, ಪ್ರತಿವಾದಿಯು ಇದರ ಪರವಾಗಿ

ಯಾವುದನ್ನೂ ಹೊರತರುವ ಪ್ರಯತ್ನ ಮಾಡಿಲ್ಲ. ಪ್ರಾ.ಸಾ.3ರ ಪ್ರಕರಣದಲ್ಲಿರುವಂತೆ ಪಾಟೀ ಸವಾಲನ್ನು ನಡೆಸುವಾಗ ಪ್ರತಿವಾದಿ ಇದೇ ತಪ್ಪೆಸಗಿದೆ. ಪ್ರಶ್ನಿತ ವಾಸ್ತವಿಕ ಘಟನೆಗೆ ಸಂಬಂಧಿಸಿದಂತೆ ಪ್ರಾ.ಸಾ.8ರಿಂದ ಯಾವುದೇ ಮಾಹಿತಿಯನ್ನು ಹೊರತೆಗೆಯುವ ಪ್ರಯತ್ನವನ್ನು ಇದು ಮಾಡಿಲ್ಲ. ಇದು ಪ್ರಾ.ಸಾ.8ರ ಕ್ರಿಮಿನಲ್ ಪೂರ್ವ ವೃತ್ತಾಂತಗಳನ್ನು ಮತ್ತು ಪ್ರಶ್ನಿತ ವಾಸ್ತವಿಕ ಘಟನೆಯ ನಂತರದ ಇತರ ಸಂದರ್ಭಗಳನ್ನು ಮಾತ್ರ ಕೇಂದ್ರೀಕರಿಸಿದೆ. ಪ್ರಾ.ಸಾ.8 ತನ್ನ ಪಾಟೀ ಸವಾಲಿನಲ್ಲಿ ತಡೆದುಕೊಂಡಿದ್ದಾರೆಂಬುದು ಮತ್ತು ತನ್ನ ಪಾಟೀ ಸವಾಲಿನಲ್ಲೂ ಕೂಡ ಪ್ರಶ್ನಿತ ಘಟನೆ ಬಗ್ಗೆ ಪುನರುಚ್ಚರಿಸಿರುವರೆಂಬುದನ್ನು ನಾವು ಗುರುತಿಸಿದ್ದೇವೆ.

10. ಆದಾಗ್ಯೂ, ಪ್ರತಿವಾದಿಯ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು, ಪ್ರಾ.ಸಾ.9 ಮತ್ತು 10ರ ಸಾಕ್ಷ್ಯವನ್ನು ನಂಬಲಸಾಧ್ಯವೆಂಬುದನ್ನು ವಾದಿಸುವುದನ್ನು ಸಮರ್ಥಿಸಿಕೊಂಡಿದ್ದಾರೆ. ತಮ್ಮ ಸಾಕ್ಷ್ಯದ ಮೂಲಕ ಪರಿಶೀಲಿಸಿ, ಪ್ರಾ.ಸಾ.9 ಮತ್ತು 10 ಅದರಲ್ಲು ನಿರ್ದಿಷ್ಟವಾಗಿ, ಪ್ರಾ.ಸಾ.9 ಪ್ರಾಸಿಕ್ಯೂಷನ್‌ನ ವಾದವನ್ನು ತಿದ್ದುವ ಪ್ರಯತ್ನ ಮಾಡಿದ್ದಾರೆಂದು ಸಹ ನಾವು ಅಭಿಪ್ರಾಯಪಡಬಹುದು. ಅಲ್ಲದೆ, ಪ್ರಾ.ಸಾ.3 ಮತ್ತು 8 ಹೇಳಿಕೆ ನೀಡಿರುವಂತೆಯೇ ಪ್ರಾ.ಸಾ.10 ಪ್ರಶ್ನಿತ ವಾಸ್ತವಿಕ ಘಟನೆಯ ಬಗ್ಗೆ ಹೇಳಿಕೆ ನೀಡಿದ್ದಾನೆ. ಅವನು ಆರೋಪಿಗಳಿಬ್ಬರು ಒಟ್ಟಿಗೆ ಬಂದರೆಂದು, ಮೃತನನ್ನು ತಡೆದು ಅಡ್ಡಗಟ್ಟಿ ಆತನ ಜಾತಿಯ ಹೆಸರನ್ನು ತೆಗೆದುಕೊಂಡು ಬೈದರೆಂದು ಸಹ ಹೇಳಿಕೆ ನೀಡಿದ್ದಾನೆ; ಅದಾದ ತರುವಾಯ 1ನೇ ಸಂಖ್ಯೆ ಆರೋಪಿಯು ಮೃತನನ್ನು ಒದ್ದಿರುವುದರಿಂದ 2ನೇ ಸಂಖ್ಯೆಯ ಆರೋಪಿಯು ಚಾಕುವನ್ನು ತೆಗೆದುಕೊಂಡು ಮೃತನ ಎದೆಯ ಎಡಭಾಗದಲ್ಲಿ ತಿವಿದಿದ್ದಾನೆ. ಆದಾಗ್ಯೂ ಪ್ರಾ.ಸಾ.10ರ ಪಾಟೀ ಸವಾಲನ್ನು ನೋಡಿದಾಗ ನಾವು, ಇವನು ಸಹ ನಂಬಲರ್ಹನಾದ ಸಾಕ್ಷಿದಾರನಲ್ಲವೆಂಬುದು ಗೊತ್ತಾಗುತ್ತದೆ. ಮುಖ್ಯ ವಿಚಾರಣೆಯಲ್ಲಿ ಕಂಡು ಬಂದಂಥ ಆವೃತ್ತಿಗೂ ಪಾಟೀ ಸವಾಲಿನ ಆವೃತ್ತಿಗೂ ವ್ಯತ್ಯಾಸ ಕಂಡು ಬರುತ್ತದೆ. ಆದುದರಿಂದ, ನಾವು ಪ್ರಾ.ಸಾ.9 ಮತ್ತು 10ರ ಸಾಕ್ಷ್ಯವು ನಂಬಲರ್ಹವಲ್ಲವೆಂಬ ನಿರ್ಣಯಕ್ಕೆ ಬಂದಿದ್ದೇವೆ.

ಇದು ಇರಬಹುದಾದ ಹಾಗೆ, ಪ್ರಾ.ಸಾ.3 ಮತ್ತು 8ರ ಸಾಕ್ಷ್ಯವನ್ನು ವಾಸ್ತವಿಕವಾಗಿ ಅಲ್ಲಗಳೆಯಲಾಗುವುದಿಲ್ಲವೆಂಬುದು ನಮಗೆ ಈಗಾಗಲೇ ಸ್ಪಷ್ಟವಾಗಿದೆ. ಅವರು ತಮ್ಮ ಪಾಟೀ ಸವಾಲನ್ನು ಎದುರಿಸಿದ್ದಾರೆ. ಅವರಿಬ್ಬರೂ, ತಾವು ಘಟನೆ ನಡೆದ ಸಮಯದಲ್ಲಿ ಗೋಲ್ಡ್ ಫಿಂಚ್ ಆಸ್ಪತ್ರೆ ಎದುರಿನಲ್ಲಿರುವ ಬೇಕರಿ ಬಳಿ ಟೀಯನ್ನು ಕುಡಿಯುತ್ತಿದ್ದೆವೆಂದು ಹೇಳಿಕೆ ನೀಡಿದ್ದಾರೆ. ಅವರು ಕೊಲೆ ಪ್ರಕರಣದಲ್ಲಿ ಅಧಿವಿಚಾರಣೆಯನ್ನು ಎದುರಿಸುತ್ತಿದ್ದಾರೆ. ಅಷ್ಟೇ ಏಕೆಂದರೆ ಅವರ ಆವೃತ್ತಿಯಲ್ಲಿ ಸಂದೇಹ ಬರದ ಹಾಗೆ ಅದಕ್ಕಿಂತಲೂ ನಿರ್ದಿಷ್ಟವಾಗಿ ಆಪಾದಿತನ ವಿರುದ್ಧ ಯಾವ ಕೆಟ್ಟ ಭಾವನೆಯನ್ನು ಅವರು ಹೊಂದದಿರುವಂಥ ಸಮಯದಲ್ಲಿ ಅವರು ಸ್ಥಳದಲ್ಲಿ ಹಾಜರಿದ್ದಾರೆ. ಪ್ರಾ.ಸಾ. 3 ಮತ್ತು 8 ಆಪಾದಿತನ ವಿರುದ್ಧ ಯಾವುದೇ ಕೆಟ್ಟ ಭಾವನೆಯನ್ನು ಹೊಂದಿದ್ದರು ಎಂಬುದನ್ನು ತೋರಿಸಲು ಪ್ರತಿವಾದಿಯು ಯಾವ ಒಂದು ಸೂಚನೆಯನ್ನೂ ಸಹ ನೀಡಿಲ್ಲ. ನ್ಯಾಯಾಲಯದ ದಾಖಲೆಯಲ್ಲಿರುವ ಯಾವುದೇ ಮಾಹಿತಿ ಇಲ್ಲದಿರುವುದನ್ನು ಪ್ರಾ.ಸಾ.3 ಮತ್ತು 8 ನ್ಯಾಯಾಲಯದ ಮುಂದೆ ಹೇಳಿಕೆ ನೀಡಿರುವುದಕ್ಕಾಗಿ ಆಪಾದಿತನ ವಿರುದ್ಧ ಯಾವುದೇ ಕೆಟ್ಟ ಭಾವನೆ ಹೊಂದಿದ್ದರು ಎಂದು ಭಾವಿಸಲು ಸಾಧ್ಯವಿಲ್ಲ.

ಮೊದಲ ಮಾಹಿತಿ ವರದಿಯನ್ನು ರಾತ್ರಿ 10.45ಕ್ಕೆ ಎಂದರೆ ಘಟನೆ ನಡೆದ ಕೂಡಲೇ ದಾಖಲಿಸಿದ್ದಾರೆಂಬುದು ತಿಳಿದುಬರುತ್ತದೆ. ಪ್ರಾ.ಸಾ.3, 5.3.2010 ಮತ್ತು 6.3.2010ರ ನಡುವೆ ಬರುವ ಮಧ್ಯರಾತ್ರಿ ಸುಮಾರು 12 ಗಂಟೆವರೆಗೆ ಆಸ್ಪತ್ರೆಯಲ್ಲಿದ್ದನೆಂಬುದು ಸತ್ಯ ಎಂಬುದರಲ್ಲಿ ಅದಾದ ನಂತರ ಅವನು ಪೊಲೀಸು ಠಾಣೆಗೆ ಹೋದನೆಂಬುದರಲ್ಲಿ ಯಾವುದೇ ಸಂದೇಹವಿಲ್ಲ. ಆದುದರಿಂದ, ಕಡೆಯದಾಗಿ ರಾತ್ರಿ 10.45ರಲ್ಲಿ ದೂರನ್ನು ದಾಖಲಿಸಿಲ್ಲದಿರಬಹುದು ಮತ್ತು ಮಧ್ಯರಾತ್ರಿ 12 ಗಂಟೆಯ ತರುವಾಯ ದಾಖಲಿಸಿರಬೇಕು ಎಂದು ಹೇಳಬಹುದಾಗಿದೆ. ಮೊದಲ ಮಾಹಿತಿಯು ಆಪಾದಿತರಿಬ್ಬರ ಹೆಸರನ್ನು ಒಳಗೊಂಡಿದೆ ಮತ್ತು ಅಪರಾಧ ನಡೆಯುವುದಕ್ಕೆ ಕಾರಣವಾದ ಪ್ರೇರೇಪಣೆಯನ್ನು ಒಳಗೊಂಡಂತೆ, ಪ್ರತಿಯೊಬ್ಬ ಆಪಾದಿತರ ಕಣ್ಣಿಗೆ ಕಾಣುವ ಕಾರ್ಯ ರೀತಿಗಳನ್ನು ಸಹ ಒಳಗೊಂಡಿದೆ. ಮೊದಲ ಮಾಹಿತಿ ವರದಿಯು ದಿನಾಂಕ 6.3.2010ರಂದು ಬೆಳಿಗ್ಗೆ 5.30ರಲ್ಲಿ ಅಧಿಕಾರ

ವ್ಯಾಪ್ತಿಯುಳ್ಳ ದಂಡಾಧಿಕಾರಿಯವರನ್ನು ತಲುಪಿದೆ. ಆದುದರಿಂದ ಪ್ರಾ.ಸಾ.3 ಮತ್ತು ಪ್ರಾಸಿಕ್ಯೂಷನ್ನು ಅದರಲ್ಲೂ ನಿರ್ದಿಷ್ಟವಾಗಿ ಯಾವುದೇ ಆಪಾದಿತನ ವಿರುದ್ಧ ಪ್ರಾ.ಸಾ.3 ಗೊಣಗದಿರುವಾಗ, ಕಲ್ಪನೆಗೆ ಅವಕಾಶ ಇಲ್ಲ.

11. ನಿಶಾನೆ ಪಿ.7ರಲ್ಲಿರುವ ಮರಣೋತ್ತರ ಶವಪರೀಕ್ಷೆ ಮತ್ತು ವೈದ್ಯ – ಪ್ರಾ.ಸಾ.12ರ ಸಾಕ್ಷ್ಯವು, ಮೃತನು, ತನ್ನ ಎದೆಯ ಎಡಭಾಗದಲ್ಲಿ ಒಂದು ಗಾಯದಿಂದ ಬಳಲುತ್ತಿದ್ದನೆಂಬುದನ್ನು ಪ್ರಕಟಪಡಿಸುತ್ತದೆ. ಘಟನೆಯ ಸಮಯದಲ್ಲಿ ಮೃತನು ಜೀನ್ಸ್ ಪ್ಯಾಂಟ್ ಅಲ್ಲದೆ ಬನಿಯನ್ ಟೀ ಷರ್ಟನ್ನು ಧರಿಸಿದ್ದನು. ಟೀ–ಷರ್ಟು ಎದೆಯ ಎಡಭಾಗದಲ್ಲಿ ಒಣಗಿದ ರಕ್ತದ ಕಲೆಗಳೊಂದಿಗೆ 2 ಸೆಂ.ಮೀ.ಗಳಷ್ಟು ಹರಿದುಹೋಗಿತ್ತೆಂಬುದನ್ನು ಮರಣೋತ್ತರ ಶವಪರೀಕ್ಷೆ ಮತ್ತೆ ಸ್ಪಷ್ಟಪಡಿಸುತ್ತದೆ. ಬನಿಯನ್ನು ಸಹ ಎದೆಯ ಎಡಭಾಗದಲ್ಲಿ ಒಣಗಿದ ರಕ್ತದ ಕಲೆಗಳಿಂದ ಕೂಡಿದ್ದು ಸುಮಾರು 2.ಸೆಂ.ಮೀ ಅಳತೆಯುಷ್ಟು ಹರಿದುಹೋಗಿದೆಯೆಂಬುದನ್ನು ಮತ್ತೆ ಸ್ಪಷ್ಟಪಡಿಸುತ್ತದೆ. ಮರಣೋತ್ತರ ಶವಪರೀಕ್ಷೆ ವರದಿಯಿಂದ ಸ್ಪಷ್ಟವಾಗುವಂತೆ ಮೃತನು ನೀಲಿ ಬಣ್ಣದ ಜೀನ್ಸ್ ಪ್ಯಾಂಟ್ ಮತ್ತು ಕಂದು ಬಣ್ಣದ ಒಳ ಉಡುಪನ್ನು ಧರಿಸಿದ್ದರೂ ಕೂಡ, ಪ್ಯಾಂಟ್‌ನಲ್ಲಾಗಲಿ ಅಥವಾ ಒಳುಡುಪಿನಲ್ಲಾಗಲಿ ರಕ್ತದ ಕಲೆಗಳಿರಲಿಲ್ಲ. ಇದು, ರಕ್ತದ ಕಲೆಗಳು ಗಾಯವಾದ ಜಾಗದಲ್ಲಿ ಮಾತ್ರ ಇದ್ದವು, ಬೇರೆ ಇತರ ಜಾಗದಲ್ಲಿ ಇರಲಿಲ್ಲ ಎಂಬುದನ್ನು ತಿಳಿಸುತ್ತದೆ. ಮರಣೋತ್ತರ ಶವಪರೀಕ್ಷೆಯಲ್ಲಿ ವಿವರಿಸಲಾದಂತೆ ಗಾಯವು, ಕೊರಳೆಲುಬಿನ ಮಧ್ಯದಲ್ಲಿ 5ನೇ ಒಳಗಿನ ಪಕ್ಕೆಲುಬಿನ ಜಾಗದಲ್ಲಿ (inter costal space) ಎದೆಯ ಎಡಭಾಗದ ಪಾರ್ಶ್ವದಲ್ಲಿ ಓರೆಯಾಗಿ 1.5 ಸೆಂ.ಮೀ x 0.3 ಸೆಂ.ಮೀ. ಅಳತೆಯಲ್ಲಿ ಗೂಟದ ಆಕಾರದ ತಿವಿದ ಗಾಯವಿದೆ ಮತ್ತು ಎಡ ಎದೆ ತೊಟ್ಟಿನ ಕೆಳಗೆ ಮತ್ತು ಮಧ್ಯದಲ್ಲಿ 5 ಸೆಂ.ಮೀ.ಗಳಿವೆ, ಮಧ್ಯಮಾರ್ಗದಿಂದ 6 ಸೆಂ.ಮೀ ದೂರದಲ್ಲಿದೆ ಮತ್ತು ಕೊರಳೆಲುಬಿನ ಮಧ್ಯದ ಕೆಳಗೆ 21.ಸೆಂ.ಮೀ ಇದೆ; ಗಾಯದ ತುದಿ ಪೂರ್ತಿಯಾಗಿ ಕತ್ತರಿಸಿ ಹೋಗಿದೆ. ಗಾಯದ ಆಳ ಸುಮಾರು 8 ಸೆಂ.ಮೀ ನಷ್ಟಿದೆಯೆಂಬುದು ಮರಣೋತ್ತರ ಶವ ಪರೀಕ್ಷೆಯಲ್ಲಿ ಸಹ ಸ್ಪಷ್ಟವಾಗುತ್ತದೆ. ಹೃದಯಾವರಣದ

ಕುಳಿಯು (Pericondial cavity) 400 ಮಿಲಿ ಲೀಟರ್ ರಕ್ತ ಮತ್ತು ರಕ್ತದ ಹೆಪ್ಪನ್ನು ಒಳಗೊಂಡಿರುತ್ತದೆ ಮತ್ತು ಹೃದಯಾವರಣದ ಜಾಗವು 600 ಮಿ.ಲೀ. ರಕ್ತವನ್ನು ಒಳಗೊಂಡಿದೆ. ಹಾಗಾಗಿ, ಹೆಚ್ಚಿನ ಪ್ರಮಾಣದ ರಕ್ತ ದೇಹದೊಳಗೆ ಸಂಗ್ರಹವಾಗಿತ್ತು ಎಂಬುದು ಮರಣೋತ್ತರ ಶವಪರೀಕ್ಷೆ ವರದಿ ಮತ್ತು ಸಾಕ್ಷ್ಯದಿಂದ ಸ್ಪಷ್ಟವಾಗುತ್ತದೆ. ಪ್ರಸ್ತುತ ಗಾಯದ ಸುತ್ತ ರಕ್ತಸ್ರಾವವಾಗಿದ್ದರೂ ದೇಹದ ಹೊರಗಡೆ ರಕ್ತಸ್ರಾವವಾಗಿರಲಿಲ್ಲ.

12. ಈ ಸಂದರ್ಭದಲ್ಲಿ ಅಪೀಲುದಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು, ಗಾಯವು 1.5 ಸೆಂ.ಮೀನಷ್ಟು ಅಗಲವಾಗಿರುತ್ತದೆಂದು ಮತ್ತು 2ಸೆಂ.ಮೀ ಅಳತೆಯ ಬ್ಲೇಡನ್ನು ಹೊಂದಿರುವ ಚಾಕುವಿನಿಂದ ಇದು ಆಗಿರಲು ಸಾಧ್ಯವಿಲ್ಲವೆಂದು ವಾದಿಸಿದ್ದಾರೆ. ಮೃತನ ಬನಿಯನ್ ಮತ್ತು ಟೀ–ಷರ್ಟು ಸುಮಾರು 2 ಸೆಂ.ಮೀಗಳಷ್ಟು ಹರಿದಿದ್ದುದನ್ನು ನಾವು ಈಗಾಗಲೇ ಮೇಲೆ ಸೂಚಿಸಿದ್ದೇವೆ. ಸ್ವಾಭಾವಿಕವಾಗಿ ಬನಿಯನ್ ಮತ್ತು ಟೀ–ಷರ್ಟು ಹೆಚ್ಚು ಸ್ಥಿತಿಸ್ಥಾಪಕತ್ವವನ್ನು ಹೊಂದಿದ್ದು ಬನಿಯನ್ ಮತ್ತು ಟೀ–ಷರ್ಟು ಗಾಯದ ಅಗಲಕ್ಕಿಂತಲೂ ಹೆಚ್ಚು ಹರಿದಿರಬೇಕು, ಅಲ್ಲದೆ, ಮರಣೋತ್ತರ ಶವಪರೀಕ್ಷೆಯ ಸಮಯದಲ್ಲಿ, ವೈದ್ಯರು ಖಚಿತವಾದ ನಿಖರತೆಯ ಗಾಯದ ಅಳತೆಯನ್ನು ನೀಡಿರುವರೆಂದು ಅಂದುಕೊಳ್ಳಲಾಗುವುದಿಲ್ಲ. ಆದರೆ, ಗಾಯವು 1.5 ಸೆಂ.ಮೀ ಅಳತೆ ಹೊಂದಿತ್ತು ಮತ್ತು ಸುಮಾರು 8 ಸೆಂ.ಮೀ.ಗಳಷ್ಟು ಆಳವಾಗಿತ್ತೆಂಬ ವಿಷಯವಿರುತ್ತದೆ. ದಾಖಲೆಯಲ್ಲಿರುವ ಇತರ ಮಾಹಿತಿಯನ್ನು ಗಮನಿಸಿದರೆ 1.5 ಸೆಂ.ಮೀ ಮತ್ತು 2 ಸೆಂ.ಮೀ ಗಳ ನಡುವಿನ ವ್ಯತ್ಯಾಸವು ತುಂಬಾ ಚಿಕ್ಕದಾಗಿರುತ್ತದೆ.

ಆಯುಧ ಎಂ.ಒ.ಸಂ.1ನ್ನು ಪರಿಶೀಲಿಸಿದ ನಂತರ ನಿಶಾನೆ ಪಿ.8 ತಾನು ನೀಡಿದ ವೈದ್ಯರ ಅಭಿಪ್ರಾಯ ಆಗಿದೆ ಎಂಬ ಟಿಪ್ಪಣಿಗೂ ಸಹ ಸಂಬಂಧಪಡುತ್ತದೆ. ಚಾಕುವಿನ ಬ್ಲೇಡಿನ ಅಳತೆ ಉದ್ದದಲ್ಲಿ 10 ಸೆಂ.ಮೀ ಮತ್ತು ಬ್ಲೇಡಿನ ಗರಿಷ್ಠ ಅಗಲ 2 ಸೆಂ.ಮೀ ಆಗಿದೆಯೆಂಬುದನ್ನು ಇದು ಪ್ರಕಟಪಡಿಸುತ್ತದೆ. ಮರಣೋತ್ತರ ಶವಪರೀಕ್ಷೆ ಮತ್ತು ವೈದ್ಯರ ಅಭಿಪ್ರಾಯ ಗಾಯದ ಆಳ 3 ಸೆಂ.ಮೀ. ಆಗಿತ್ತು

ಮತ್ತು ಚಾಕುವಿನ ಬ್ಲೇಡಿನ ಅಳತೆ 10 ಸೆಂ.ಮೀ ಅಗಲವನ್ನು ಹೊಂದಿದೆ ಎಂಬುದನ್ನು ಸ್ಪಷ್ಟಪಡಿಸುತ್ತಿದ್ದು ಇದು 8 ಸೆಂ.ಮೀಗಳವರೆಗೆ ಎದೆಗೆ ಚಾಕುವಿನ ಬ್ಲೇಡು ಹೊಕ್ಕಿತ್ತೆಂಬುದನ್ನು ತಿಳಿಸುತ್ತದೆ. ಚಾಕುವಿನ 2 ಸೆಂ.ಮೀ ಅಳತೆಯ ಬ್ಲೇಡಿನ ಉಳಿದ ಭಾಗ ಎದೆಗೆ ಹೊಕ್ಕಿರಲಿಲ್ಲ. ಸಂಪೂರ್ಣ ಬ್ಲೇಡು ಎದೆಯನ್ನು ಹೊಕ್ಕಿಲ್ಲದಿರುವುದರಿಂದ ಗಾಯವು 1.5 ಸೆಂ.ಮೀ ಅಗಲ ಇರಬಹುದೆಂದು, ಬ್ಲೇಡಿನ ಗರಿಷ್ಠ ಅಳತೆ 2 ಸೆಂ.ಮೀಗಳಾಗಿತ್ತೆಂದು (ಹಿಡಿಕೆಯ ಬಳಿ) ವೈದ್ಯರು ಅಭಿಪ್ರಾಯಪಟ್ಟಿದ್ದಾರೆ. ಮರಣೋತ್ತರ ಶವಪರೀಕ್ಷೆ ವರದಿಯಲ್ಲಿ ಸೂಚಿಸಿದ ತಿವಿದ ಗಾಯವು ಚಾಕುವಿನಿಂದ ಆದುದಾಗಿರಬಹುದೆಂದು ಇದನ್ನು ಇವರು ಪರೀಕ್ಷಿಸಿರುವರೆಂಬುದನ್ನು ವೈದ್ಯರು ನಿಶಾನೆ ಪಿ.8ರಲ್ಲಿ ಅಭಿಪ್ರಾಯಪಟ್ಟಿದ್ದಾರೆ. ಆದುದರಿಂದ ನಾವು ಪ್ರಾಸಿಕ್ಯೂಷನ್‌ನ ವಾದದಲ್ಲಿ ಯಾವುದೇ ಅಸಂಗತತೆಯನ್ನು ಗುರುತಿಸಿಲ್ಲ.

ಎಡ ಎದೆಗೂಡಿನ ಕುಹರವು 600 ಮಿ.ಲೀಟರ್ ರಕ್ತವನ್ನು ಮತ್ತು ರಕ್ತದ ಹೆಪ್ಪನ್ನು ಹಿಡಿಸುತ್ತದೆ ಮತ್ತು ಹೃದಯಾವರಣದ ಕುಹರವು 400 ಮಿ.ಲೀಟರ್ ರಕ್ತ ಮತ್ತು ರಕ್ತದ ಹೆಪ್ಪನ್ನು ಹಿಡಿಸುತ್ತದೆಯೆಂಬುದನ್ನು ಹೆಚ್ಚಿನ ಮರಣೋತ್ತರ ಶವ ಪರೀಕ್ಷೆ ಸ್ಪಷ್ಟಪಡಿಸುತ್ತದೆ. ಹಾಗೆಯೇ ಮೃತನ ಎದೆಯ ಒಳಭಾಗದಲ್ಲಿ ಸುಮಾರು ಒಂದು ಲೀಟರ್ ರಕ್ತ ಸಂಗ್ರಹವಾಗಿತ್ತು. ಎದೆಗೆ ಚುಚ್ಚಿದ ಗಾಯವಾದ ಕಾರಣದಿಂದ ಆಘಾತವಾಗಿ, ರಕ್ತನಾಳಗಳು ಒಡೆದುಹೋದ ಕಾರಣದಿಂದ ಸಾವು ಸಂಭವಿಸಿದೆಯೆಂಬುದು ವೈದ್ಯರ ಅಭಿಪ್ರಾಯವಾಗಿದೆ.

13. ಪ್ರಾ.ಸಾ.3 ಮತ್ತು 8ರ ಸಾಕ್ಷ್ಯವು, ಕ್ರಿಮಿನಲ್ ಪೂರ್ವ ವೃತ್ತಾಂತದಿಂದ ಕೂಡಿದ ಪಕ್ಷಪಾತದ ಸಾಕ್ಷಿದಾರರಾಗಿರುವುದರಿಂದ ಇವರನ್ನು ಅವಲಂಬಿಸಬಹುದಾಗಿಲ್ಲವೆಂದು ಅಪೀಲುದಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು ವಕೀಲರ ಪರಿಷತ್ತಿನಲ್ಲಿ ಮಾಡಿದ ನಿವೇದನೆಗಳನ್ನು ಸಹ ನಾವು ಒಪ್ಪಿರುವುದಿಲ್ಲ.

ನಿಕಟವರ್ತಿ ಸಂಬಂಧವು, ಸಾಮಾನ್ಯವಾಗಿ ವಾಸ್ತವಿಕ ಆಪಾದಿತನನ್ನು ತಡೆಯುತ್ತಿದೆ ಮತ್ತು ಮುಗ್ಧ ವ್ಯಕ್ತಿಯನ್ನು ಕೆಟ್ಟದಾಗಿ ದೋಷಾರೋಪಣೆಯಲ್ಲಿ ಸಿಕ್ಕಿಸಲಾಗುತ್ತಿದೆಯೆಂಬುದು ಈವರೆಗೆ ಚೆನ್ನಾಗಿ ತಿಳಿದುಬಂದಿದೆ. ಭಾವನೆಗಳು ಅತಿಯಾದಾಗ ಶತೃತ್ವಕ್ಕೆ ವೈಯಕ್ತಿಕ ಕಾರಣವಿದ್ದಾಗ ಮುಗ್ಧ ವ್ಯಕ್ತಿಯನ್ನು ಎಳೆಯುವ ಪ್ರವೃತ್ತಿಯಿರುತ್ತದೆ. ಅವರ ವಿರುದ್ಧ ಸಾಕ್ಷಿದಾರನು ಅಪರಾಧದೊಟ್ಟಿಗೆ ದ್ವೇಷವನ್ನು ಹೊಂದಿರುತ್ತಾನೆ ಅಂಥ ದೂಷಣೆಗೆ ಬುನಾದಿ ಹಾಕಲಾಗುತ್ತದಾದರೂ ನಿಂದನೆಯಿಂದ ದೂರವಿರುವ ಸಂಬಂಧ ಸತ್ಯದ ಖಾತ್ರಿಯಾಗಿರುತ್ತದೆ. ಆದಾಗ್ಯೂ, ನಾವು ಯಾವುದನ್ನೂ ಸಾಮಾನ್ಯೀಕರಣಗೊಳಿಸಲು ಪ್ರಯತ್ನಿಸುತ್ತಿಲ್ಲ. ಪ್ರತಿಯೊಂದು ಪ್ರಕರಣವನ್ನು ಅದರದೇ ಆದ ಸಂಗತಿಗಳ ಮೇಲೆ ತೀರ್ಮಾನಿಸಬೇಕಾಗುತ್ತದೆ. ನಮ್ಮ ಅಭಿಪ್ರಾಯಗಳು, ನಮ್ಮ ಮುಂದೆ ವಿವೇಕದ ಸಾಮಾನ್ಯ ನಿಯಮದಂತೆ ಪ್ರಕರಣಗಳಲ್ಲಿ ಆಗಾಗ ಏನು ಬರುತ್ತವೆ ಎಂಬುದರ ಬಗ್ಗೆ ಮಾತ್ರ ಪೈಪೋಟಿ ನಡೆಸುತ್ತಿರುತ್ತವೆ. ಅಂಥ ಸಾಮಾನ್ಯ ನಿಯಮ ಯಾವುದೂ ಇಲ್ಲ. ಪ್ರತಿಯೊಂದು ಪ್ರಕರಣವು ಸೀಮಿತವಾಗಿರುತ್ತದೆ ಮತ್ತು ಅದರದೇ ಆದ ಸಂಗತಿಗಳಿಂದ ಹೆಣೆದುಕೊಂಡಿರುತ್ತದೆ. ಸಾಕ್ಷಿದಾರರು ನೀಡಿದ ಸಾಕ್ಷ್ಯವು, ಪಕ್ಷಪಾತದ ಸಾಕ್ಷ್ಯವಾಗಿದೆ ಅಥವಾ ಆಸಕ್ತಿಕರ ಸಾಕ್ಷಿದಾರರಾಗಿದ್ದಾರೆನ್ನುವ ಆಧಾರದ ಮಾತ್ರದಿಂದಲೇ ನಿರಾಕರಿಸಬೇಕೆಂದು ವಾದಿಸಲು ಇದು ಯುಕ್ತವಾದುದಲ್ಲವೆಂದು ಭಾವಿಸುತ್ತೇವೆ. ಇದು ಪಕ್ಷಪಾತದಿಂದ ಕೂಡಿದ್ದು, ಒಂದೇ ಒಂದು ಆಧಾರದ ಮೇಲಿನ ಅಂಥ ಸಾಕ್ಷ್ಯದ ಯಾಂತ್ರಿಕ ತಿರಸ್ಕರಣೆಯು ನ್ಯಾಯದ ವಿಫಲತೆಗೆ ಕಾರಣವಾಗುತ್ತದೆ. ಸಾಕ್ಷ್ಯವನ್ನು ಎಷ್ಟು ಮೌಲ್ಯಮಾಪನ ಮಾಡಬೇಕು ಎಂಬ ಬಗ್ಗೆ ಕಠಿಣ ಅಥವಾ ಶೀಘ್ರಗತಿಯ ನಿಯಮವನ್ನು ಹೇಳಲಾಗುವುದಿಲ್ಲ. ಅಂಥ ಸಾಕ್ಷ್ಯವನ್ನು ವ್ಯವಹರಿಸುವಲ್ಲಿ ನ್ಯಾಯಿಕ ಪ್ರಸ್ತಾವ ಎಚ್ಚರಿಕೆಯಿಂದಿರಬೇಕಾಗುತ್ತದೆ, ಆದರೆ ಅಂಥ ಸಾಕ್ಷ್ಯವನ್ನು ತಿರಸ್ಕರಿಸಬೇಕು ಏಕೆಂದರೆ ಅದು ಪಕ್ಷಪಾತದಿಂದ ಕೂಡಿದೆಯೆನ್ನುವ ವಾದವನ್ನು ಸರಿಯೆಂದು ಒಪ್ಪಿಕೊಳ್ಳಲಾಗುವುದಿಲ್ಲ.

14. ಮತ್ತೊಂದು ಕಡೆ ವಿಷಯದಲ್ಲಿ, ನಾವು, ಪ್ರಾ.ಸಾ.9 ಮತ್ತು 10ರ ಸಾಕ್ಷ್ಯವು ಅಪೀಲುದಾರನ ಅಪರಾಧ ನಿರ್ಣಯವನ್ನು ಅವಲಂಬಿಸಲು ಆಗುವುದಿಲ್ಲವೆಂದು ಈಗಾಗಲೇ ಸ್ಪಷ್ಟಪಡಿಸಿದ್ದೇವೆ. ಅವರ ಸಾಕ್ಷ್ಯವು ಸುಧಾರಿತ ಆವೃತ್ತಿಯಾಗಿದೆಯೆಂಬುದು ಕಂಡು ಬರುತ್ತದೆ. ಈ ಸಂದರ್ಭದಲ್ಲಿ ಪ್ರಾಸಿಕ್ಯೂಷನ್ನು ಪ್ರಾ.ಸಾ.9 ಮತ್ತು 10ರ ಮೂಲಕ ತನ್ನ ಪರವಾಗಿ ತಪ್ಪು ಸಾಕ್ಷ್ಯವನ್ನು ಸೃಜಿಸಿದೆಯೆಂಬ ಸಂಗತಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಸಂಪೂರ್ಣ ಪ್ರಾಸಿಕ್ಯೂಷನ್‌ನ ಕಥೆಯನ್ನು ಒಪ್ಪಲಾಗುವುದಿಲ್ಲವೆಂದು ಅಪೀಲುದಾರನ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು ನಿವೇದನೆಗಳನ್ನು ಮಾಡಿದ್ದಾರೆ. ಪ್ರತಿವಾದಿಯ ಮನವಿಯ ಮುಖ್ಯಾಂಶ "falsus in uno falsus in omnibus" (ಒಂದು ವಿಷಯದಲ್ಲಿ ತಪ್ಪಾದರೆ, ಪ್ರತಿಯೊಂದರಲ್ಲು ತಪ್ಪು) ಎಂಬ ತತ್ವವನ್ನು ಅನ್ವಯಿಸುವುದಾಗಿದೆ. ಈ ವಾದವು ಸ್ಪಷ್ಟವಾಗಿ ಅಸಮರ್ಥನೀಯವಾದುದಾಗಿದೆ. ಸಾಕ್ಷ್ಯದ ಮುಖ್ಯ ಭಾಗವು ನ್ಯೂನತೆಯಿಂದ ಕಂಡು ಬಂದರೂ ಕೂಡ ಇತರ ಸಹ–ಆಪಾದಿತ ವ್ಯಕ್ತಿಗಳ ಸಂಖ್ಯೆಯನ್ನು ಖುಲಾಸೆಗೊಳಿಸಿದ್ದಾಗ್ಯೂ, ಆಪಾದಿತನ ಅಪರಾಧವನ್ನು ರುಜುವಾತುಪಡಿಸಲು ಉಳಿಕೆ ಬಾಕಿಯು ಸಾಕಷ್ಟಿದ್ದ ಸಂದರ್ಭದಲ್ಲಿ, ಅವನ ಅಪರಾಧ ನಿರ್ಣಯವನ್ನು ನಿರ್ವಹಿಸಬಹುದು. ಹಾಗೆಂಯೇ ಇಬ್ಬರು ಸಾಕ್ಷಿದಾರರ ವಾದವು ಸಮರ್ಥನೀಯವಾಗಿರದಿದ್ದರೆ, ಇತರ ಇಬ್ಬರು ಪ್ರತ್ಯಕ್ಷ ಸಾಕ್ಷಿದಾರರ ಸಾಕ್ಷ್ಯವು ನಂಬಲರ್ಹವಾಗಿದ್ದರೆ, ಅದು, ಇಬ್ಬರು ಸಾಕ್ಷಿದಾರರು ನಂಬಲರ್ಹವಾಗಿಲ್ಲದಿದ್ದರೂ, ಆಪಾದಿತನ ಅಪರಾಧವನ್ನು ರುಜುವಾತುಪಡಿಸಲು ಅದು ಸಾಕಷ್ಟಾಗುತ್ತದೆ, ನಂಬಲರ್ಹವಾದ ಇತರ ಇಬ್ಬರು ಸಾಕ್ಷಿದಾರರ ಸಾಕ್ಷ್ಯದ ಆಧಾರದ ಮೇಲೆ ಅಪರಾಧ ನಿರ್ಣಯವನ್ನು ನಿರ್ವಹಿಸಬಹುದು. ಜೊಳ್ಳಿನಿಂದ ಕಾಳನ್ನು ಪ್ರತ್ಯೇಕಿಸುವುದು ನ್ಯಾಯಾಲಯದ ಕರ್ತವ್ಯವಾಗಿರುತ್ತದೆ. ಜೊಳ್ಳನ್ನು ಕಾಳಿನಿಂದ ಪ್ರತ್ಯೇಕಿಸಬಹುದಾದಲ್ಲಿ, ಇತರ ಆಪಾದಿತ ವ್ಯಕ್ತಿಗಳ ತಪ್ಪನ್ನು ರುಜುವಾತುಪಡಿಸಲು ಸಾಕ್ಷ್ಯವು ನ್ಯೂನತೆಯಿಂದ ಕಂಡುಬಂದಿದೆಯೆನ್ನುವ ಸಂಗತಿ ಏನೇ ಇದ್ದರೂ ಆಪಾದಿತನ ಅಪರಾಧ ನಿರ್ಣಯ ಮಾಡಲು ನ್ಯಾಯಾಲಯಕ್ಕೆ ಮುಕ್ತವಾಗಿರುತ್ತದೆ. ನಿರ್ದಿಷ್ಟ ಮುಖ್ಯ ಸಾಕ್ಷಿದಾರ

ಅಥವಾ ನಿರ್ದಿಷ್ಟ ಮಾಹಿತಿಯು ಸುಳ್ಳಾಗಿದ್ದರೆ ಅದು ಪ್ರಾರಂಭದಿಂದ ಕೊನೆಯವರೆಗೂ ಅದು ಹಾಳಾಗಿರುತ್ತದೆ. ಗರಿಷ್ಠ "falsus in uno falsus in omnibus" (ಒಂದು ಸುಳ್ಳಾದರೆ, ಎಲ್ಲವೂ ಸುಳ್ಳಾಗುತ್ತದೆ) ಎಂಬುದನ್ನು ಭಾರತದಲ್ಲಿ ಅನ್ವಯಿಸಿಲ್ಲ ಮತ್ತು ಸಾಕ್ಷಿದಾರರು ಸುಳ್ಳುಗಾರರು ಎಂದು ಕಳಂಕ ಹಚ್ಚಲಾಗುವುದಿಲ್ಲ. ಒಂದು ಸುಳ್ಳಾದರೆ ಎಲ್ಲವೂ ಸುಳ್ಳಾಗಿರುತ್ತದೆ. ("falsus in uno falsus in omnibus") ಎಂಬ ಸೂತ್ರವನ್ನು ಸಾಮಾನ್ಯ ಒಪ್ಪಿಗೆಯಾಗಿ ಸ್ವೀಕರಿಸಲಾಗುವುದಿಲ್ಲ ಅಥವಾ ಕಾನೂನಿನ ನಿಯಮದ ಸ್ಥಾನಮಾನವನ್ನು ಪಡೆದುಕೊಳ್ಳಲು ಈ ಸಾಮಾನ್ಯ ಸೂತ್ರವನ್ನು ಅನ್ವಯಿಸಲಾಗುವುದಿಲ್ಲ. ಇದು ಮಾತ್ರ ಕಾನೂನಿನ ಎಚ್ಚರಿಕೆಯಾಗಿರುತ್ತದೆ. ಇದೆಲ್ಲಾ ಯಾವುದಕ್ಕೆ ಕಾರಣವಾಗುತ್ತದೆಯೆಂದರೆ, ಇಂಥ ಪ್ರಕರಣಗಳಲ್ಲಿ, ಪ್ರಮಾಣವನ್ನು ಕಡೆಗಣಿಸಲಾಗುವುದಿಲ್ಲ ಮತ್ತು ಇದನ್ನು ಕಡೆಗಣಿಸಬೇಕೆಂಬುದು ವಿಷಯವಲ್ಲ ಎಂದಾಗುತ್ತದೆ. ತತ್ವವು ಸಾಕ್ಷ್ಯದ ಮೌಲ್ಯದ ಪ್ರಶ್ನೆಯನ್ನು ಮಾತ್ರ ಒಳಗೊಳ್ಳುತ್ತದೆ. ಇದನ್ನು ನ್ಯಾಯಾಲಯವು ನೀಡಲಾದ ಸನ್ನಿವೇಶಗಳೊಟ್ಟಿಗೆ ಅನ್ವಯಿಸಬಹುದು ಆದರೆ ಯಾವುದನ್ನು 'ಸಾಕ್ಷ್ಯದ ಕಡ್ಡಾಯ ನಿಯಮ'ವೆಂದು ಕರೆಯುತ್ತೇವೆಯೋ ಅದಾಗುವುದಿಲ್ಲ.

15. ಅವರು ಜಗಳದಲ್ಲಿ ಹಸ್ತಕ್ಷೇಪ ಮಾಡಲು ಪ್ರಯತ್ನಿಸದಿರುವುದರಿಂದ ಮತ್ತು ಮೃತನ ಜೀವವನ್ನು ಸಂರಕ್ಷಿಸಲು ಪ್ರಯತ್ನಿಸಿರುವುದರಿಂದ ಪ್ರಾ.ಸಾ.3 ಮತ್ತು 8ರ ಆವೃತ್ತಿಯನ್ನು ನಂಬಲಾಗುವುದಿಲ್ಲವೆಂದು ಅಪೀಲುದಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು ಮಾಡಿದ ನಿವೇದನೆಯನ್ನು ನಾವು ಸಮ್ಮತಿಸುವುದಿಲ್ಲ.

ಬೇರೆ ಬೇರೆ ಸಾಕ್ಷಿದಾರರು ಬೇರೆ ಬೇರೆ ಸನ್ನಿವೇಶಗಳಲ್ಲಿ ಭಿನ್ನವಾಗಿ ಪ್ರತಿಕ್ರಿಯಿಸುತ್ತಾರೆಂಬುದು ಸಾಮಾನ್ಯ ತಿಳಿವಳಿಕೆಯಾಗಿದೆ. ಅಸಂಗತತೆಯ ಆಧಾರದ ಮೇಲೆ ಯಾವುದೇ ಒಂದು ಗುಂಪಿನ ವಿಧಾನ ಅಥವಾ ಮಾನವೀಯ ಪ್ರತಿಕ್ರಿಯೆಯ ನಿಯಮವಿರಲು ಸಾಧ್ಯವಿಲ್ಲ, ಈ ಕಾರಣದಿಂದ ಸಾಕ್ಷ್ಯದ ಭಾಗವನ್ನು ತಿರಸ್ಕರಿಸಬಹುದು. ಬೇರೆ ಬೇರೆ ಸಾಕ್ಷಿದಾರರು ಬೇರೆ ಬೇರೆ ಸನ್ನಿವೇಶಗಳಲ್ಲಿ ವಿಭಿನ್ನ ರೀತಿಯಲ್ಲಿ

ಪ್ರತಿಕ್ರಿಯಿಸುವರೆಂಬುದು ಸಾಮಾನ್ಯ ತಿಳಿವಳಿಕೆಯಾಗಿದೆ; ಇದರಿಂದ ಕೆಲವು ವೇಳೆ ಮಾತನಾಡಲಾಗುವುದಿಲ್ಲ. ಕೆಲವರು ದೃಶ್ಯಾವಳಿಗಳಿಂದ ದೂರವಿರುವಾಗ ಕೆಲವು ಪ್ರಲಾಪಗಳು ಪ್ರಾರಂಭವಾಗುತ್ತವೆ ಮತ್ತು ಇನ್ನು ಕೆಲವರು ಅಪರಾಧ ಮಾಡಿ ಧೈರ್ಯದಿಂದ ಮುಂದೆ ಬರಬಹುದು, ತಪ್ಪುಗಳನ್ನು ಸರಿಪಡಿಸಬೇಕು ಎಂಬುದು ನಂಬಿಕೆ. ಸಂಗತಿಯ ವಿಷಯವಾಗಿ, ಇದು ವೈಯಕ್ತಿಕ ಮತ್ತು ಅವರನ್ನು ಅವಲಂಬಿಸಿರುತ್ತದೆ. ಮಾನವೀಯ ಪ್ರತಿಕ್ರಿಯೆಗೆ ಮತ್ತು ಯಾವುದೇ ಗುಂಪಿನ ವಿಧಾನದ ಅಡಿಯಲ್ಲಿ ಬರದಿರುವ ಆತನ ಪ್ರತಿಕ್ರಿಯೆಯನ್ನು ಹಾಜರುಪಡಿಸಿಲ್ಲವೆಂಬ ಆಧಾರದ ಮೇಲೆ ಮತ್ತು ನಿಯಮಗಳಿಗೆ ಕಟ್ಟುಬೀಳುವ ಅಭ್ಯಾಸದಿಂದ ಸಾಕ್ಷ್ಯದ ಭಾಗವನ್ನು ಅಲಕ್ಷಿಸಲು ಯಾವುದೇ ಗುಂಪಿನ ವಿಧಾನ ಅಥವಾ ಏಕರೂಪ ನಿಯಮ ಇರಲು ಸಾಧ್ಯವಿಲ್ಲ. ***(ಲೀಲಾ ರಾಮ್ –ವಿರುದ್ಧ– ಹರಿಯಾಣ ರಾಜ್ಯ*** [1]***,*** ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ನೋಡಿ).

ಆದ್ದರಿಂದ ನಾವು, ಪ್ರಾ.ಸಾ.3 ಮತ್ತು 8ರ ಆವೃತ್ತಿಯನ್ನು ನಂಬದೆ ಇರಲು ಯಾವುದೇ ಸಿಂಧುವಾದ ಕಾರಣವನ್ನು ಗುರುತಿಸಿಲ್ಲ.

16. ಅಪರಾಧದ ಆ ಸನ್ನಿವೇಶದಲ್ಲಿ ಪ್ರಾ.ಸಾ.3 ಮತ್ತು 8ರ ಹಾಜರಾತಿಯು ಅದಾಗೇ ಸಂದೇಹಾಸ್ಪದವಾಗಿದೆಯೆಂದು, ಹಾಗೆಯೇ ಅವರು ಗಾಯಾಳುವನ್ನು ಆಟೋರಿಕ್ಷಾದಲ್ಲಿ ಆಸ್ಪತ್ರೆಗೆ ಸಾಗಿಸಿದ್ದರೂ ಸಹ ಅವರ ಬಟ್ಟೆಯಲ್ಲಿ ರಕ್ತದ ಕಲೆಗಳಿರಲಿಲ್ಲವೆಂದು ಅಪೀಲುದಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು ನಿವೇದಿಸಿದ್ದಾರೆ.

ಮೃತನ ಜೀನ್ಸ್ ಪ್ಯಾಂಟ್ ಮತ್ತು ಒಳುಡುಪಿನಲ್ಲಿ ಸಹ ರಕ್ತದ ಕಲೆಗಳಿರಲಿಲ್ಲವೆಂದು ನಾವು ಈಗಾಗಲೇ ಮೇಲೆ ಸೂಚಿಸಿದ್ದೇವೆ. ಗಾಯಾಳುವಿನ

1. (1999) 9 ಎಸ್‌ಸಿಸಿ 525

ಎದೆಯ ಗಾಯದ ಭಾಗಕ್ಕೆ ರಕ್ತದ ಕಲೆಗಳು ಇದ್ದವು. ಚಾಕುವಿನ ಬ್ಲೇಡು ಒಳಹೊಕ್ಕ ಜಾಗದ ಸುತ್ತ ರಕ್ತದ ಕಲೆಗಳು ಕಂಡು ಬಂದಿದ್ದು, ತತ್ಪರಿಣಾಮವಾಗಿ ಮೃತನ ಬನಿಯನ್ ಮತ್ತು ಟೀ–ಷರ್ಟ್ ನಲ್ಲಿ ಮಾತ್ರ ರಕ್ತದ ಕಲೆಗಳಿದ್ದು ಅಂಥ ರಕ್ತದ ಕಲೆಗಳು ಹರಿದುಹೋದ ಸ್ಥಳದ ಸುತ್ತ ಮಾತ್ರ ಕಂಡು ಬಂದಿವೆಯೇ ಹೊರತು ಬೇರೆಲ್ಲೂ ಇರುವುದಿಲ್ಲ. ಘಟನೆ ನಡೆದ ಕಾರಣದಿಂದ ಎದೆಯ ಗೂಡಿನ ಒಳಭಾಗದಲ್ಲಿ ಒಂದು ಲೀಟರ್ ರಕ್ತ ಸಂಗ್ರಹವಾಗಿರುವುದನ್ನು ಸಹ ನಾವು ಸ್ಪಷ್ಟಪಡಿಸಿದ್ದೇವೆ. ಹಾಗಾಗಿ ದೇಹದ ಹೊರಭಾಗಕ್ಕಿಂತ ದೇಹದ ಒಳಭಾಗದಲ್ಲಿ ಹೆಚ್ಚು ರಕ್ತಸ್ರಾವವಾಗಿತ್ತು. ತತ್ಪರಿಣಾಮವಾಗಿ ಪ್ರಾ.ಸಾ.3 ಮತ್ತು 8ರ ಬಟ್ಟೆಯಲ್ಲಿ ರಕ್ತದ ಕಲೆಗಳು ಕಂಡುಬರದಿರಬಹುದು.

17. ಇಬ್ಬರೂ ಆಪಾದಿತರು ಸ್ಥಳಕ್ಕೆ ಒಟ್ಟಿಗೆ ಬಂದು, ಅವರಲ್ಲಿ ಒಬ್ಬ ಆಪಾದಿತ ಚಾಕುವನ್ನು ಹೊಂದಿದ್ದನೆಂಬುದು ಸಂಗತಿಗಳಿಂದ ಸ್ಪಷ್ಟವಾಗುತ್ತದೆ; ಇಬ್ಬರೂ ಆಪಾದಿತರು ಮೃತನ ಮೇಲೆರಗಿದ್ದಾರೆ; ಆಪಾದಿತ ಸಂ.1 ಅಪೀಲುದಾರನು ಇಲ್ಲಿ, ಮೃತನ ದೇಹದ ಮೇಲೆ ತನ್ನ ಮಂಡಿಯಿಂದ ಒದ್ದಿದ್ದಾನೆ; 2ನೇ ಸಂಖ್ಯೆಯ ಆಪಾದಿತನು ಮೃತನ ಎದೆಯಲ್ಲಿ ಚುಚ್ಚಿದ್ದಾನೆ; ಇಬ್ಬರೂ ಆರೋಪಿತರು ಮೃತನನ್ನು ಬೈದು, ಅವನನ್ನು ಥಳಿಸುವ ಮೊದಲು ಅವನೊಂದಿಗೆ ಜಗಳವಾಡಿದ್ದಾರೆ. ಘಟನೆ ನಡೆದ ಕೂಡಲೇ ಅವರಿಬ್ಬರೂ ಸ್ಥಳದಿಂದ ಪಲಾಯನಗೈದಿದ್ದಾರೆ. ಇಬ್ಬರೂ ಆರೋಪಿತರು ಒಂದೇ ಉದ್ದೇಶವನ್ನು ಹೊಂದಿದ್ದಾರೆ. ಸಂಪೂರ್ಣವಾಗಿ ಸಿದ್ಧರಾಗಿ ಸ್ಥಳಕ್ಕೆ ಬರಲಾಗುತ್ತಿರಲಿಲ್ಲ ಎಂಬುದನ್ನು ಈ ಸಂಗತಿಗಳು ಸ್ಪಷ್ಟವಾಗಿ ತಿಳಿಸುತ್ತವೆ. ಹಿಂದೆ ಸೂಚಿಸಲಾದ ಹಾಗೆ ಆಪಾದಿತರು ಸಾಮಾನ್ಯ ಉದ್ದೇಶವನ್ನು ಹಂಚಿಕೊಳ್ಳುವ ಸಂಬಂಧದಲ್ಲಿ ಪ್ರಾಸಿಕ್ಯೂಷನ್‌ನ ವಾದವನ್ನು ನಂಬದಿರುವುದಕ್ಕೆ ಪ್ರತ್ಯಕ್ಷ ಸಾಕ್ಷಿದಾರರಿಗೆ ಪ್ರತಿವಾದಿಯು ಒಂದೇ ಒಂದು ಸಲಹೆಯನ್ನು ಕೂಡ ಮಾಡಿಲ್ಲ.

ಈ ವಿಷಯವನ್ನು ದೃಷ್ಟಿಯಲ್ಲಿಟ್ಟುಕೊಂಡು, ಅಧೀನ ನ್ಯಾಯಾಲಯವು ಭಾರತ ದಂಡ ಸಂಹಿತೆಯ 302ನೇ ಪ್ರಕರಣದ ಮೇರೆಗೆ ದಂಡಿಸಬಹುದಾದ ಅಪರಾಧಕ್ಕಾಗಿ ಇಲ್ಲಿ 1ನೇ ಸಂಖ್ಯೆ ಆಪಾದಿತ – ಅಪೀಲುದಾರನ ಅಪರಾಧವನ್ನು ನಿರ್ಣಯಿಸುವುದನ್ನು ಸಮರ್ಥಿಸಿಕೊಂಡಿದೆ. ದಾಖಲೆಯಲ್ಲಿರುವ ಸಂಪೂರ್ಣ ಮಾಹಿತಿಯನ್ನು ಪುನರ್ ಪರಿಗಣಿಸಿದ್ದರೂ ಕೂಡ, ನೀಡಲಾದ ಕಾರಣಗಳಿಂದ ಹಸ್ತಕ್ಷೇಪ ಮಾಡುವ ಯಾವುದೇ ಆಧಾರವನ್ನು ನಾವು ಗುರುತಿಸಿಲ್ಲ ಮತ್ತು ಅಧಿವಿಚಾರಣಾ ನ್ಯಾಯಾಲಯವು ಒಂದು ತೀರ್ಮಾನಕ್ಕೆ ಬಂದಿರುತ್ತದೆ.

ಆದ್ದರಿಂದ, ಅಪೀಲು ವಿಫಲಗೊಂಡಿದ್ದು, ತದನುಸಾರವಾಗಿ ಇದನ್ನು 'ವಜಾಗೊಳಿಸುವ' ತೀರ್ಮಾನವನ್ನು ಎತ್ತಿಹಿಡಿದೆ.